24	ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ, ಕಬ್ಬೇಕೊಪ್ಪಲು	ಹಿರಿಯ ಪಶುವೈದ್ಯಕೀಯ ಪರೀಕ್ಷಕರು	1	1	0
		ಕಿರಿಯ ಪಶುವೈದ್ಯಕೀಯ ಪರೀಕ್ಷಕರು	1	1	0
		ಡಿ ದರ್ಜೆ ನೌಕರರು	1	0	1
25	ಪಶುಚಿಕಿತ್ಸಾಲಯ, ಬೋಳನಹಳ್ಳಿ	ಪಶುವೈದ್ಯಾಧಿಕಾರಿ	1	1	0
		ಹಿರಿಯ ಪಶುವೈದ್ಯಕೀಯ ಪರೀಕ್ಷಕರು	1	1	0
		ಕಿರಿಯ ಪಶುವೈದ್ಯಕೀಯ ಪರೀಕ್ಷಕರು	1	0	1
		ಡಿ ದರ್ಜೆ ನೌಕರರು	1	0	1
		ಒಟ್ಟು	96	50	46

ನಿರ್ದೇಶಕರು

ಅನುಬಂಧ - 2

ಕ್ರ.ಸಂ	ವರ್ಷ	ದುರಸ್ಥಿ ಕಾಮಗಾರಿಯ ಸಂಸ್ಥೆಯ ಹೆಸರು	ಮಂಜೂರಾದ ಮೊತ್ತ (ರೂ: ಲಕ್ಷಗಳಲ್ಲಿ)	ಕಾಮಗಾರಿಯ ಹೆಸರು
1	2019-20	ಪಶುಆಸ್ಪತ್ರೆ, ಹುಣಸೂರು	**8.00**	ಔಷಧ ಕೊಠಡಿ
2	2020-21	ಪಶುಆಸ್ಪತ್ರೆ, ಹುಣಸೂರು	2.00	ದುರಸ್ಥಿ, ಸುಣ್ಣ/ಬಣ್ಣ, ಕಾಂಪೌಂಡ್ ನಿರ್ಮಾಣ
		ಪ್ರಾಪಚಿ ಕೇಂದ್ರ,ನೇರಳೆ ಕುಪ್ಪೆ	2.00	ದುರಸ್ಥಿ, ಸುಣ್ಣ/ಬಣ್ಣ, ಕಾಂಪೌಂಡ್ ನಿರ್ಮಾಣ
		ಪ್ರಾಪಚಿ ಕೇಂದ್ರ, ಹೀರಿಕ್ಯಾತನಹಳ್ಳಿ	2.00	ದುರಸ್ಥಿ, ಸುಣ್ಣ/ಬಣ್ಣ, ಕಾಂಪೌಂಡ್ ನಿರ್ಮಾಣ
		ಪ್ರಾಪಚಿ ಕೇಂದ್ರ, ಕೊತ್ತೆಗಾಲ	2.00	ದುರಸ್ಥಿ, ಸುಣ್ಣ/ಬಣ್ಣ, ಕಾಂಪೌಂಡ್ ನಿರ್ಮಾಣ
		ಒಟ್ಟು:	**8.00**	
3	2021-22	ಪಶು ಆಸ್ಪತ್ರೆ,ಗಾವಡಗೆರೆ	3.00	ದುರಸ್ಥಿ ಮತ್ತು ಕಾಂಪೌಂಡ್ ನಿರ್ಮಾಣ
		ಪ್ರಾಪಚಿ ಕೇಂದ್ರ, ಕರಿ ಮುದ್ದನಹಳ್ಳಿ	3.00	ದುರಸ್ಥಿ ಕಾಮಗಾರಿ
		ಪಶು ಚಿಕಿತ್ಸಾಲಯ, ತೆಂಕಲ ಕೊಪ್ಪಲು	3.00	ಕಾಂಪೌಂಡ್ ನಿರ್ಮಾಣ
		ಒಟ್ಟು:	9.00	
		ಒಟ್ಟು 25.00 (ರೂಪಾಯಿ ಇಪ್ಪತ್ತೈದು ಲಕ್ಷಗಳು ಮಾತ್ರ)		

ನಿರ್ದೇಶಕರು

ಕರ್ನಾಟಕ ವಿಧಾನಸಭೆ

15ನೇ ವಿಧಾನಸಭೆ

15ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.	:	**248**
ಮಾನ್ಯ ಸದಸ್ಯರ ಹೆಸರು	:	**ಶ್ರೀ. ಮಂಜುನಾಥ ಹೆಚ್.ಪಿ. (ಹುಣಸೂರು)**
ಉತ್ತರಿಸುವ ದಿನಾಂಕ	:	**13-02-2023**
ಉತ್ತರಿಸುವ ಸಚಿವರು	:	**ಮಾನ್ಯ ಲೋಕೋಪಯೋಗಿ ಸಚಿವರು**

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಹುಣಸೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಮತ್ತು ಗ್ರಾಮೀಣ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿಕೊಂಡು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-85/10 ಇಎಪಿ ಬೆಂಗಳೂರು ದಿನಾಂಕ: 01-09-2020ರ ಆದೇಶದಲ್ಲಿ ಹುಣಸೂರು ತಾಲ್ಲೂಕಿನಲ್ಲಿ ಒಟ್ಟು 26.00 ಕಿಮೀ ಉದ್ದದಲ್ಲಿ 3 ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿರುತ್ತದೆ. ಸದರಿ ರಸ್ತೆಗಳ ಪೈಕಿ 7.50 ಕಿಮೀ ಉದ್ದದ ಹುಣಸೂರು ತಾಲ್ಲೂಕಿನ ಹಿರಿಕ್ಯಾತನಹಳ್ಳಿ-ರಾಮೇನಹಳ್ಳಿ ರಸ್ತೆಯನ್ನು ರೂ. 110.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ. ಉಳಿದ ರಸ್ತೆಗಳನ್ನು ಅನುದಾನದ ಲಭ್ಯತೆಗನುಗುಣವಾಗಿ ಅಭಿವೃದ್ಧಿ ಪಡಿಸಲಾಗುವುದು. (ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ)
ಆ)	ಹಾಗಿದ್ದಲ್ಲಿ, ಎಷ್ಟು ಕಿಲೋ ಮೀಟರ್ ಉದ್ದದ ರಸ್ತೆಗಳನ್ನು ಇಲಾಖೆಗೆ ಹಸ್ತಾಂತರಿಸಿಕೊಂಡು ಅಭಿವೃದ್ಧಿಪಡಿಸಿ ಮೇಲ್ದರ್ಜೆಗೇರಿಸಲಾಗುವುದು; ಇದಕ್ಕೆ ಸರ್ಕಾರ ಬಿಡುಗಡೆ ಮಾಡಬಹುದಾದ ಅನುದಾನವೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	

ಸಂಖ್ಯೆ. ಲೋಇ E-52 ಇಎಪಿ 2023

(ಸಿ.ಸಿ. ಪಾಟೀಲ್)

ಲೋಕೋಪಯೋಗಿ ಸಚಿವರು

ವಿಧಾನಸಭೆಯ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 248ರ ಅನುಬಂಧ - 1

Sl. No.	Taluk	Name of work	Amount
1	Hunsur	Hirikyathanahalli – Ramenahalli	7.50
2	Hunsur	Hosurugate-Rathnapuri	7.90
3	Hunsur	Moorkal-Haralahalli to Hunsur-Panchavalli Via Vaddambalu	10.60
		Total	26.00

ಪ್ರಧಾನ ಇಂಜಿನಿಯರ್,
ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ,
4ನೇ ಮಹಡಿ, ಲೋಇ ಪೂರಕಕಟ್ಟಡ, ಕೆ.ಆರ್.ವೃತ್ತ
ಬೆಂಗಳೂರು-560001

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 249
ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು)
ಉತ್ತರಿಸುವ ದಿನಾಂಕ : 13.02.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಕಳೆದ 3 ವರ್ಷಗಳಲ್ಲಿ ಹುಣಸೂರು ತಾಲ್ಲೂಕಿನಲ್ಲಿ ಅಕ್ರಮ ಸಾಗುವಳಿ ಜಮೀನು ಮಂಜೂರಾತಿಗಾಗಿ ನಮೂನೆ 50 ಮತ್ತು 53 ರಲ್ಲಿ ಸಲ್ಲಿಕೆಯಾದ ಅರ್ಜಿಗಳೆಷ್ಟು; ಸದರಿ ಅರ್ಜಿಗಳ ಪೈಕಿ ತಿರಸ್ಕೃತಗೊಂಡ ಮತ್ತು ಪುರಸ್ಕೃತಗೊಂಡ ಅರ್ಜಿಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94-ಎ(4) ಗೆ ತಿದ್ದುಪಡಿ ತಂದು ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 108ಸಿಸಿಸಿ ಸೇರ್ಪಡೆ ಮಾಡಿ ನಮೂನೆ 57 ರಲ್ಲಿ ಹೊಸದಾಗಿ ಅರ್ಜಿಗಳನ್ನು ಸ್ವೀಕರಿಸಲು ದಿನಾಂಕ:17.03.2018 ರಿಂದ ಅವಕಾಶ ಕಲ್ಪಿಸಿರುವುದರಿಂದ ಕಳೆದ 3 ವರ್ಷಗಳಲ್ಲಿ ನಮೂನೆ 50 ಮತ್ತು ನಮೂನೆ 53 ರಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
(ಆ)	ಸ್ವೀಕೃತಗೊಂಡ ಅರ್ಜಿಗಳ ಪೈಕಿ ಭೂ ಮಂಜೂರಾತಿ ಸಭೆಗೆ ಮಂಡನೆಯಾದ ಅರ್ಜಿಗಳೆಷ್ಟು (ವಿವರ ನೀಡುವುದು)	ಹಿಂದಿನ 3 ವರ್ಷಗಳಲ್ಲಿ ನಮೂನೆ 50 ಮತ್ತು 53 ರಡಿ ಯಾವುದೇ ಅರ್ಜಿಗಳು ಸ್ವೀಕೃತಗೊಂಡಿಲ್ಲ. ಆದಾಗ್ಯೂ ಈ ಹಿಂದೆ ನಮೂನೆ 50 ಮತ್ತು 53 ರಡಿ ಸಲ್ಲಿಕೆಯಾದ ಅರ್ಜಿಗಳ ಪೈಕಿ ವಜಾಗೊಂಡ ಅರ್ಜಿಗಳ ಸಂಬಂಧ ಸಂಬಂಧಪಟ್ಟ ಉಪವಿಭಾಗಾಧಿಕಾರಿ ರವರ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿಕೊಂಡು ಮರುಪರಿಶೀಲನೆಗೆ ಆದೇಶವಾಗಿರುವಂತಹ ಒಟ್ಟು 115 ಅರ್ಜಿಗಳನ್ನು ಮರುಪರಿಶೀಲನೆಗೆ ಸಮಿತಿಗೆ ಮಂಡಿಸಿದೆ.
(ಇ)	ಭೂ ಮಂಜೂರಾತಿ ಸಮಿತಿಯಲ್ಲಿ ಭೂಮಿ ಮಂಜೂರಾಗಿ ವಿತರಣೆಯಾಗಿರುವ ಸಾಗುವಳಿ ಚೀಟಿಗಳೆಷ್ಟು; (ಅರ್ಜಿದಾರರ ಮತ್ತು ಜಮೀನಿನ 3 ವರ್ಷಗಳ ವಿವರ ನೀಡುವುದು)	ಕಳೆದ 3 ವರ್ಷಗಳಲ್ಲಿ 46 ಪ್ರಕರಣಗಳಲ್ಲಿ ಸಾಗುವಳಿ ಚೀಟಿಯನ್ನು ನೀಡಲಾಗಿದೆ. ಮಂಜೂರಿದಾರರ ಹಾಗೂ ಜಮೀನಿನ ವಿವರವನ್ನು ಅನುಬಂಧ ದಲ್ಲಿ ನೀಡಲಾಗಿದೆ.
(ಈ)	ನಮೂನೆ 50 ಮತ್ತು 53ರ ಅನ್ವಯ ಈಗಾಗಲೇ ಸಾಗುವಳಿ ಚೀಟಿ ವಿತರಣೆಯಾಗಿ ಖಾತೆಗೆ ಬಾಕಿಯಿರುವ ಪ್ರಕರಣಗಳೆಷ್ಟು? (ವಿವರ ನೀಡುವುದು)	ಸಾಗುವಳಿ ಚೀಟಿ ವಿತರಣೆಯಾಗಿರುವ 46 ಪ್ರಕರಣಗಳಿಗೆ ಸಂಬಂಧಿಸಿದಂತೆ ಖಾತೆಗೆ ಕ್ರಮವಹಿಸಲು ಬಾಕಿಯಿದೆ.

(ಕಡತ ಸಂಖ್ಯೆ:ಕಂಇ 17 ಎಲ್‌ಜಿಎಂ 2023)

(ಆರ್.ಅಶೋಕ)
ಕಂದಾಯ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:241ರ ಅನುಬಂಧ

ಹುಣಸೂರು ತಾಲ್ಲೂಕು ನಮೂನೆ-53 ರಲ್ಲಿ ಸಾಗುವಳಿ ನೀಡಿರುವ ವಿವರ						
ಕ್ರ. ಸಂಖ್ಯೆ	ಹೆಸರು ಮತ್ತು ವಿಳಾಸ	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ	ಸಕ್ರಮಗೊಳಿಸಿದ ದಿನಾಂಕ
1	ಪುಟ್ಟಲಕ್ಷ್ಮಮ್ಮ ಕೋಂ ಲೇ ಬಸವರಾಜೇಗೌಡ	ಬಿಳಿಕೆರೆ	ವಡೇರಹೊಸಹಳ್ಳಿ	107	1-05	05-03-22
2	ತಾಯಮ್ಮ ಕೋಂ ಲೇ ಪುಟ್ಟಯ್ಯ	ಬಿಳಿಕೆರೆ	ಚಲ್ಲಹಳ್ಳಿ	42	2-20	06-08-22
3	ಶೀನೇಗೌಡ ಬಿನ್ ಚಿಕ್ಕೇಗೌಡ	ಹನಗೋಡು	ಕಡೇಮನುಗನಹಳ್ಳಿ	31	4-00	06-08-22
4	ಮಹದೇವಶೆಟ್ಟಿ ಬಿನ್ ಲೇ ಕಾಳಶೆಟ್ಟಿ	ಹನಗೋಡು	ಹೆಮ್ಮಿಗೆ	40	4-20	06-08-22
5	ಮಾದಯ್ಯ ಬಿನ್ ಗೋಪಾಲಯ್ಯ	ಹನಗೋಡು	ಹೆಮ್ಮಿಗೆ	40	4-00	06-08-22
6	ಲಕ್ಷ್ಮಮ್ಮ ಕೋಂ ಕೃಷ್ಣೇಗೌಡ	ಹನಗೋಡು	ಮಾದಹಳ್ಳಿ	2	2-02	06-08-22
7	ಗೌರಮ್ಮ ಕೋಂ ಕೃಷ್ಣೇಗೌಡ	ಹನಗೋಡು	ಮಾದಹಳ್ಳಿ	2	3-00	06-08-22
8	ಕೆಂಪದೇವಮ್ಮ ಕೋಂ ಲೇ ತಮ್ಮಯ್ಯ	ಹನಗೋಡು	ಹೆಮ್ಮಿಗೆ	40	2-25	06-08-22
9	ರುಕ್ಮಿಣಿಯಮ್ಮ ಕೋಂ ಲೇ ಚೆನ್ನಸ್ವಾಮಯ್ಯ	ಕಸಬಾ	ಬನ್ನಿಕುಪ್ಪೆ	106	1-06	06-08-22
10	ಲಕ್ಷ್ಮಣ ಬಿನ್ ಲೇ ಬೋರಯ್ಯ	ಹನಗೋಡು	ಭಾರತವಾಡಿ	6	3-00	06-08-22
11	ಮರಿಯಮ್ಮ ಕೋಂ ಪುಟ್ಟಸ್ವಾಮಿಗೌಡ	ಹನಗೋಡು	ವಾರಂಚಿ	16	1-30	06-08-22
12	ರಾಮಕೃಷ್ಣೇಗೌಡ ಬಿನ್ ಚಿಕ್ಕ ಸಿದ್ದೇಗೌಡ	ಬಿಳಿಕೆರೆ	ಗೋಹಳ್ಳಿ	22	3-00	06-05-22
13	ಮರಿಚಿಕ್ಕಯ್ಯ ಬಿನ್ ಸಿದ್ದಯ್ಯ	ಹನಗೋಡು	ದೊಡ್ಡಹೆಜ್ಜೂರು	64	3-30	05-03-00
14	ಲಕ್ಷ್ಮಮ್ಮ ಕೋಂ ಕೆಂಚೇಗೌಡ	ಬಿಳಿಕೆರೆ	ವಡೇರಹೊಸಹಳ್ಳಿ	107	1-20	05-03-22
15	ಕೃಷ್ಣಮೂರ್ತಿ ಬಿನ್ ಸೋಮಣ್ಣ	ಹನಗೋಡು	ತಮ್ಮಡಹಳ್ಳಿ	37	2-10	05-03-22
16	ಮಹೇಶ್ ಬಿನ್ ಸೋಮಣ್ಣ	ಹನಗೋಡು	ತಮ್ಮಡಹಳ್ಳಿ	37	2-10	05-03-22
17	ಸ್ವಾಮಿಗೌಡ ಬಿನ್ ಲೇ ಚಿಕ್ಕತಮ್ಮೇಗೌಡ	ಬಿಳಿಕೆರೆ	ವಡೇರಹೊಸಹಳ್ಳಿ	107	2-20	05-03-22
18	ಪುಟ್ಟಸಿದ್ದಮ್ಮ ಕೋಂ ದಾಸೇಗೌಡ	ಬಿಳಿಕೆರೆ	ವಡೇರಹೊಸಹಳ್ಳಿ	107	2-30	05-03-22
19	ಗೋವಿಂದೇಗೌಡ ಬಿನ್ ಲೇ ಜವರೇಗೌಡ	ಬಿಳಿಕೆರೆ	ಬೆಟ್ಟದೂರು	71	2-00	06-08-22
20	ಶಿವಣ್ಣೇಗೌಡ ಬಿನ್ ಚಿಕ್ಕಹೈದೇಗೌಡ	ಬಿಳಿಕೆರೆ	ವಡೇರಹೊಸಹಳ್ಳಿ	107	1-30	05-03-22
21	ಮರಿದೇವಪ್ಪ ಬಿನ್ ಲೇ ಚಾಮಪ್ಪ	ಬಿಳಿಕೆರೆ	ಹಂದನಹಳ್ಳಿ	94	2-00	06-05-22
22	ವೆಂಕಟಮ್ಮ ಕೋಂ ನಂಜುಂಡೇಗೌಡ	ಬಿಳಿಕೆರೆ	ವಡ್ಡರಹಳ್ಳಿ	62	0-15	06-05-22
23	ಲೋಕೇಶ ಬಿನ್ ಲೇ ಪುಟ್ಟೇಗೌಡ	ಹನಗೋಡು	ನೇಗತ್ತೂರು	54	0-34	06-08-22
24	ಪದ್ಮಮ್ಮ ಕೋಂ ಸ್ವಾಮಿಗೌಡ	ಹನಗೋಡು	ನೇಗತ್ತೂರು	54	2-00	06-08-22
25	ಸಣ್ಣಪ್ಪಾಜಿ ಬಿನ್ ಚಲುವಯ್ಯ	ಹನಗೋಡು	ಹೆಮ್ಮಿಗೆ	40	1-13	06-08-22
26	ನೀಲಮ್ಮ ಕೋಂ ಲೇ ಬಸವೇಗೌಡ	ಬಿಳಿಕೆರೆ	ವಡೇರಹೊಸಹಳ್ಳಿ	107	2-34	05-03-22
27	ಕರೀಗೌಡ ಬಿನ್ ಲೇ ಕರೀಗೌಡ	ಬಿಳಿಕೆರೆ	ದಲ್ಲಾಳು	217	2-30	06-04-22
28	ಗಿರಿರಾಜು ಬಿನ್ ಲೇ ಗಿರಿಯಯ್ಯ	ಬಿಳಿಕೆರೆ	ಮಲ್ಲಿನಾಥಪುರ	62	1-03	05-03-22
29	ಎನ್.ಜೆ.ಬಸವಣ್ಣ ಬಿನ್ ಲೇ ಜಯಣ್ಣ	ಹನಗೋಡು	ತಮ್ಮಡಹಳ್ಳಿ	37	4-00	05-09-22
30	ಸಿದ್ದಯ್ಯ ಬಿನ್ ಜೋಗಯ್ಯ	ಹನಗೋಡು	ಭಾರತವಾಡಿ	5	2-30	14-11-22
31	ವಿಮಲ ಕೋಂ ಲೇ ಶಿವನಂಜೇಗೌಡ	ಹನಗೋಡು	ನೇಗತ್ತೂರು	54	2-00	05-09-22
32	ನಂಜುಂಡಯ್ಯ ಉ ನಂಜುಂಡಸ್ವಾಮಿ ಬಿನ್ ಲೇ ಬಸವಯ್ಯ	ಬಿಳಿಕೆರೆ	ಕುಪ್ಪಕೊಳಗಟ್ಟ	73	2-00	05-09-22
33	ಕಾವೇರಮ್ಮ ಕೋಂ ಲೇ ರಾಮೇಗೌಡ	ಹನಗೋಡು	ವಾರಂಚಿ	16	1-20	14-11-22
34	ಶಿವಣ್ಣ ಬಿನ್ ಲೇ ಚಿಕ್ಕೇಗೌಡ	ಬಿಳಿಕೆರೆ	ಅಂಕನಹಳ್ಳಿ	76	0-20	14-11-22
35	ವೆಂಕಟೇಶ್ ಬಿನ್ ಸಣ್ಣೇಗೌಡ	ಬಿಳಿಕೆರೆ	ಸೋನಹಳ್ಳಿ	47	3-25	05-09-22
36	ಅರುಣ್ ಕುಮಾರ್, ಎಸ್.ಕೆ ಬಿನ್ ಲೇ ಕಾಳೇಗೌಡ	ಬಿಳಿಕೆರೆ	ಸೋನಹಳ್ಳಿ	47	2-20	05-09-22
37	ನಟರಾಜು ಬಿನ್ ಲೇ ನರಸಯ್ಯ	ಬಿಳಿಕೆರೆ	ಮನುಗನಹಳ್ಳಿ	44/9	1-05	05-09-22
38	ಕಾಳೇಗೌಡ ಬಿನ್ ತಿಮ್ಮರಾಯಿಗೌಡ	ಹನಗೋಡು	ಮಾದಹಳ್ಳಿ	3	3-30	14-11-22
39	ರಾಮೇಗೌಡ ಬಿನ್ ಈರೇಗೌಡ	ಹನಗೋಡು	ಭಾರತವಾಡಿ	13	2-00	14-11-22
40	ಶಿವಮ್ಮ ಕೋಂ ರಾಜೇಗೌಡ	ಬಿಳಿಕೆರೆ	ಶ್ರವಣನಹಳ್ಳಿ	82/1	0-38	14-11-22
41	ಶಿವರಾಮೇಗೌಡ ಬಿನ್ ರಾಮೇಗೌಡ	ಗಾವಡಗೆರೆ	ಮೋದೂರು	34	1-10	06-05-22
42	ಮಹದೇವೇಗೌಡ ಬಿನ್ ವೆಂಕಟೇಗೌಡ	ಕಸಬಾ	ತೊಂಡಾಳು	81	1-25	14-11-22
43	ಕುಮಾ ಬಿನ್ ಜವರೇಗೌಡ	ಹನಗೋಡು	ಮಾದಹಳ್ಳಿ	2	3-20	14-11-22
44	ಸಾಗರ್ ಬಿನ್ ಲೇ ಪುಟ್ಟಪ್ಪ	ಬಿಳಿಕೆರೆ	ದೊಡ್ಡಕಾಡನಹಳ್ಳಿ	74/1	1-20	05-09-22
45	ಗೋಪಮ್ಮ ಕೋಂ ರಾಮಯ್ಯ	ಹನಗೋಡು	ಭಾರತವಾಡಿ	5	3-10	05-09-22
46	ಪಾರ್ವತಮ್ಮ ಕೋಂ ಲೇ ಮಹದೇವಚಾರಿ,	ಗಾವಡಗೆರೆ	ಬಿಳಿಗೆರೆ	18	1-05.08	14-11-22

ತಹಸೀಲ್ದಾರ್

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 250
ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ. (ಹುಣಸೂರು
ಉತ್ತರಿಸುವ ದಿನಾಂಕ : 13.02.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಹುಣಸೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದ ವಸತಿ ರಹಿತ ಸಾರ್ವಜನಿಕರಿಗೆ ನಿವೇಶನ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹುಣಸೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ವಸತಿ ಯೋಜನೆಗೆ ಜಮೀನು ಕೋರಿರುವ ಯಾವುದೇ ಪ್ರಸ್ತಾವನೆ ಬಾಕಿ ಇರುವುದಿಲ್ಲ.
(ಆ)	ಹಾಗಿದ್ದಲ್ಲಿ, ಹುಣಸೂರು ಮತಕ್ಷೇತ್ರದ ಯಾವ ಯಾವ ಸರ್ಕಾರಿ ಜಮೀನುಗಳನ್ನು ವಸತಿ ರಹಿತರ ನಿವೇಶನಕ್ಕಾಗಿ ಗುರುತಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	1. ಹುಣಸೂರು ಪಟ್ಟಣ ವ್ಯಾಪ್ತಿಯಲ್ಲಿ ಹುಣಸೂರು ಗ್ರಾಮದ ಸ.ನಂ. 73/1 ರಲ್ಲಿ 8-00 ಎಕರೆ ಜಮೀನು ಆಶ್ರಯ ಯೋಜನೆಗೆ ಕಾಯ್ದಿರಿಸಿ ನಗರಸಭೆಗೆ ಹಸ್ತಾಂತರವಾಗಿರುತ್ತದೆ. ಉಪವಿಭಾಗಾಧಿಕಾರಿ, ಹುಣಸೂರು ರವರ ಆದೇಶ ಸಂಖ್ಯೆ: ಎಲ್ಎನ್‌ಡಿ(ಇ) 116/2007-08 ರಂತೆ ಆರ್.ಟಿ.ಸಿ. ಇಂಡೀಕರಣವಾಗಿರುತ್ತದೆ. 2.ಗಾವಡಗೆರೆ ಹೋಬಳಿ, ರಾಮೇನಹಳ್ಳಿ ಸ.ನಂ. 72 ರಲ್ಲಿ 1-38 ಎಕರೆ ಆಶ್ರಯ ಯೋಜನೆಗೆ ಕಾಯ್ದಿರಿಸಲಾಗಿರುತ್ತದೆ. 3.ಕಸಬಾ ಹೋಬಳಿ, ಬನ್ನಿಕುಪ್ಪೆ ಸ.ನಂ. 355/7 ರಲ್ಲಿ 3-14 ಎಕರೆ ಉಪವಿಭಾಗಾಧಿಕಾರಿ, ಹುಣಸೂರು ರವರ ಆದೇಶ ಸಂಖ್ಯೆ: ಆರ್‌ಆರ್. 120/1994-95 ರಂತೆ ಆಶ್ರಯ ಯೋಜನೆಗೆ ಕಾಯ್ದಿರಿಸಿದೆ. 4.ಬಿಳಿಕೆರೆ ಹೋಬಳಿ, ಮನುಗನಹಳ್ಳಿ ಸ.ನಂ. 152/1 ರಲ್ಲಿ 16-13 ಎಕರೆ ಜಿಲ್ಲಾಧಿಕಾರಿಯವರ ಆದೇಶ ಸಂ: ಎಲ್ಎನ್‌ಡಿಪಿಆರ್: 22/1992-93 ರಂತೆ ಆಶ್ರಯ ಯೋಜನೆಗೆ ಕಾಯ್ದಿರಿಸಿದೆ.
(ಇ)	ಹಾಗಿದ್ದಲ್ಲಿ, ಯಾವ ಕಾಲಮಿತಿಲ್ಲಿ ಎಷ್ಟು ವಿಸ್ತೀರ್ಣದ ಸರ್ಕಾರಿ ಜಮೀನನ್ನು ಈ ವಸತಿರಹಿತರಿಗೆ ನಿವೇಶನ ಒದಗಿಸುವ ಸಲುವಾಗಿ ಮಂಜೂರು ಮಾಡಲಾಗುವುದು;	ವಸತಿ ಯೋಜನೆಗೆ ಸಂಬಂಧಿಸಿದಂತೆ ಕೋರಿಕೆ ಇಲಾಖೆಯಿಂದ ಸೂಕ್ತ ಪ್ರಸ್ತಾವನೆ ಬಂದಲ್ಲಿ, ಜಮೀನು ಲಭ್ಯತೆ ಆಧರಿಸಿ ಮಂಜೂರಾತಿಗೆ ಕ್ರಮವಹಿಸಲಾಗುತ್ತಿದೆ.
(ಈ)	ಇಲ್ಲದಿದ್ದಲ್ಲಿ, ವಸತಿ ರಹಿತರಿಗೆ ಮನೆ ಕಟ್ಟಿಕೊಂಡು ವಾಸಮಾಡಲು ಅನುಕೂಲವಾಗುವಂತೆ ನಿವೇಶನ ಒದಗಿಸಲು ಸರ್ಕಾರಿ ಜಮೀನನ್ನು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	

(ಕಡತ ಸಂಖ್ಯೆ:ಕಂಇ 18 ಎಲ್‌ಜಿಎಂ 2023)

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 251

2) ಸದಸ್ಯರ ಹೆಸರು : ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು)

3) ಉತ್ತರಿಸಬೇಕಾದ ದಿನಾಂಕ : 13-02-2023

4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ

	ಪ್ರಶ್ನೆ	ಉತ್ತರ
ಅ)	ಹುಣಸೂರು ವಿಧಾನಸಭಾ ಕ್ಷೇತ್ರವು ಲಕ್ಷ್ಮಣತೀರ್ಥ ನದಿಯ ಭಾಗದಲ್ಲಿರುವುದರಿಂದ ಇಲ್ಲಿನ ನಾಯಕ ಮತ್ತು ಬುಂಡೆ ಬೆಸ್ತರು ಹೆಚ್ಚಿನ ಸಂಖ್ಯೆಯಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವುದರಿಂದ ಈ ಜನಾಂಗದ ಕ್ಷೇಮಾಭಿವೃದ್ಧಿಗೆ ರಾಷ್ಟ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಮೀನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಮತ್ತು ಮೀನುಗಾರರ ಶ್ರೇಯೋಭಿವೃದ್ಧಿಗಾಗಿ ಮೀನುಗಾರಿಕೆ ಇಲಾಖೆಯಿಂದ ನೀಡುವ ಯೋಜನೆಗಳ ವಿವರ ಕೆಳಕಂಡಂತಿರುತ್ತದೆ:- **<u>ರಾಜ್ಯ ಸರ್ಕಾರದ ಯೋಜನೆಗಳು</u>**: **1.** ಮೀನುಗಾರಿಕೆ ಸಲಕರಣೆ (ಬಲೆ/ಬೋಟು) ಕಿಟ್ಟುಗಳ ವಿತರಣೆ. **2.** ಮೀನುಮರಿ ಖರೀದಿಗೆ ಸಹಾಯಧನ. **3.** "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಡಿ, ಮೀನುಗಾರರ ಸಹಕಾರ ಸಂಘಗಳು ಇಲಾಖೆಯಿಂದ ಗುತ್ತಿಗೆ ಪಡೆದ ಕೆರೆಗಳಿಗೆ ಉಚಿತವಾಗಿ ಬಲಿತ ಬಿತ್ತನೆ ಮೀನುಮರಿಗಳ ದಾಸ್ತಾನು. **4.** ಮತ್ಸ್ಯಾಶ್ರಯ ಯೋಜನೆ. **5.** ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಉಚಿತವಾಗಿ ಮೀನುಮರಿ ಬಿತ್ತನೆ. **6.** ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಪರಿಹಾರ ವಿತರಣೆ. **7.** ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಣೆ. **<u>ಕೇಂದ್ರ ಸರ್ಕಾರದ ಯೋಜನೆಗಳು</u>** ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ:

ಕ್ರ.ಸಂ	ಯೋಜನೆ	ಘಟಕ ವೆಚ್ಚ
01.	ಮೀನುಮರಿ ಕೃಷಿ ಕೊಳಗಳ ನಿರ್ಮಾಣ	ರೂ.7.00 ಲಕ್ಷ/ಹೆ.
02.	ಮೀನುಮರಿ ಪಾಲನೆ ಕೊಳಗಳ ನಿರ್ಮಾಣ	ರೂ.7.00 ಲಕ್ಷ/ಹೆ.
03.	ಸಮಗ್ರ ಮೀನು ಕೃಷಿಗೆ ಹೂಡಿಕೆ ವೆಚ್ಚ	ರೂ.4.00 ಲಕ್ಷ/ಹೆ.
04.	ಜೌಗು ಮತ್ತು ಚೌಳು ಭೂಮಿಯಲ್ಲಿ ಮೀನು ಕೊಳಗಳ ನಿರ್ಮಾಣ ಮತ್ತು ಹೂಡಿಕೆ ವೆಚ್ಚ	ರೂ.8.00 ಲಕ್ಷ/ಹೆ.
05.	ಒಳನಾಡಿನಲ್ಲಿ ಬಯೋ ಫ್ಲೋಕ್ ಕೊಳಗಳ ನಿರ್ಮಾಣ	ರೂ.14.00 ಲಕ್ಷ/ಹೆ.
06.	ಹಿತ್ತಲು ಅಲಂಕಾರಿಕ ಮೀನು ಸಾಕಾಣಿಕೆ ಘಟಕ	ರೂ.3.00 ಲಕ್ಷ
07.	ಆರ್.ಎ.ಎಸ್ ಸ್ಥಾಪನೆ	ರೂ.7.50 ಲಕ್ಷ

08.	ಶೈತ್ಯಾಗಾರ/ಮಂಜುಗಡ್ಡೆ ಘಟಕ ನಿರ್ಮಾಣ-10ಟನ್	ರೂ.40.00 ಲಕ್ಷ
09.	ಶಾಖ ನಿರೋಧಕ ವಾಹನಗಳು	ರೂ.20.00 ಲಕ್ಷ.
10.	ಐಸ್ ಬಾಕ್ಸ್ ನೊಂದಿಗೆ ಮೋಟಾರ್ ಸೈಕಲ್	ರೂ.0.75 ಲಕ್ಷ.
11.	ಐಸ್ ಬಾಕ್ಸ್ ನೊಂದಿಗೆ ಸೈಕಲ್	ರೂ.0.10 ಲಕ್ಷ
12.	ಮೀನು ಮಾರಾಟಕ್ಕಾಗಿ ಇ-ರಿಕ್ಷಾ ಒಳಗೊಂಡಂತೆ ಐಸ್ ಬಾಕ್ಸ್ ಹೊಂದಿರುವ ತ್ರಿಚಕ್ರ ವಾಹನ	ರೂ.3.00 ಲಕ್ಷ.
13.	ಮೀನು ಆಹಾರ ತಯಾರಿಕ ಘಟಕ ದಿನಕ್ಕೆ 02 ಟನ್ ಸಾಮಾರ್ಥ್ಯ	ರೂ.30.00 ಲಕ್ಷ

ಮೇಲ್ಕಂಡ ಕೇಂದ್ರ ಸರ್ಕಾರದ ಯೋಜನೆಗಳಿಗೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ 40% ಮತ್ತು ಎಸ್‌ಸಿ/ಎಸ್‌ಟಿ/ಮಹಿಳೆ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇಕಡ 60% ಸಹಾಯಧನ ನೀಡಲಾಗುತ್ತಿದೆ.

ಆ)	ಹುಣಸೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಾಯಕರು ಮತ್ತು ಬುಂಡೆ ಬೆಸ್ತರು ಉತ್ತಮ ಮಟ್ಟದ ಜೀವನಕ್ಕಾಗಿ ಮೀನು ಮಾರುಕಟ್ಟೆ ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; (ಮಾಹಿತಿ ನೀಡುವುದು)	ಹುಣಸೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಸ್ತುತ ಮೀನು ಮಾರುಕಟ್ಟೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.
ಇ)	ಕಳೆದ ಮೂರು ವರ್ಷಗಳಲ್ಲಿ ಮೀನುಗಾರರಿಗೆ ಹಂಚಿಕೆ ಮಾಡಿರುವ ನಿವೇಶನಗಳೆಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ನಿವೇಶನ ಹಂಚಿಕೆ ಮಾಡುವ ಯೋಜನೆ ಇಲಾಖೆಯಲ್ಲಿರುವುದಿಲ್ಲವಾದ ಕಾರಣ ಮೀನುಗಾರರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ.

ಸಂಖ್ಯೆ: ಪಸಂಮೀ ಇ-22 ಮೀಇಯೋ 2023

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 252
ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸುವ ದಿನಾಂಕ : 13.02.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಶೃಂಗೇರಿ ವಿಧಾನಸಭಾ ಕ್ಷೇತ್ರದ ಎಷ್ಟು ದೇವಸ್ಥಾನಗಳ ಹೆಸರಿಗೆ ಜಾಗ ಮಂಜೂರಾಗಿದೆ; (ತಾಲ್ಲೂಕುವಾರು, ದೇವಸ್ಥಾನವಾರು ಮಾಹಿತಿ ನೀಡುವುದು)	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕೆಳಕಂಡ ದೇವಸ್ಥಾನಗಳಿಗೆ ಜಮೀನು ಮಂಜೂರು ಮಾಡಲಾಗಿದೆ.

ಕ್ರ. ಸಂ.	ದೇವಸ್ಥಾನದ ಹೆಸರು	ಸ. ನಂ.	ವಿಸ್ತೀರ್ಣ (ಎಕರೆ ಗಳಲ್ಲಿ)
1.	ಶ್ರೀ ಲೋಕಪರಮೇಶ್ವರಿ ದೇವಸ್ಥಾನ, ಹಾಲ್ಮತ್ತೂರು, ಕೊಪ್ಪ ತಾಲ್ಲೂಕು	25	3.00
2.	ಶ್ರೀ ಋಷ್ಯಶೃಂಗೇಶ್ವರ ಸ್ವಾಮಿ ದೇವಾಲಯ, ಕಿಗ್ಗಾ, ಶೃಂಗೇರಿ ತಾಲ್ಲೂಕು	160	2.00
3.	ಶ್ರೀ ದುರ್ಗಾಂಬಾ ದೇವಸ್ಥಾನ, ವಿದ್ಯಾರಣ್ಯಪುರ	206	4.00
		256	4.00
4.	ಶ್ರೀ ಕಾಳಿಕಾಂಬ ದೇವಾಲಯ ದೇವಸ್ಥಾನ, ಸಚ್ಚಿದಾನಂದ ದೇವರು, ನಾಗರ ದೇವಾಲಯಗಳು, ಶೃಂಗೇರಿ (ಶ್ರೀ ಮಠಕ್ಕೆ ಸಂಬಂಧಿಸಿದ ದೇವಾಲಯಗಳು)	191	1.00
5.	ಶ್ರೀ ಬೆಟ್ಟದ ಮಲ್ಲಿಕಾರ್ಜುನ ದೇವಾಲಯ, ಶೃಂಗೇರಿ	297	5.35

(ಆ)	ಮಂಜೂರಾಗದೇ ಬಾಕಿ ಇರುವ ದೇವಸ್ಥಾನಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು, ದೇವಸ್ಥಾನವಾರು ಮಾಹಿತಿ ನೀಡುವುದು)	ದೇವಸ್ಥಾನಗಳಿಗೆ ಜಮೀನು ಮಂಜೂರಾತಿಯ ಪ್ರಕರಣಗಳು ಬಾಕಿ ಇರುವುದಿಲ್ಲ.
(ಇ)	ಜಾಗ ಮಂಜೂರಾಗದ ಪರಿಣಾಮ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಅನ್ವಯಿಸುವುದಿಲ್ಲ

(ಈ)	ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ದೇವಸ್ಥಾನಗಳ ಹೆಸರಿಗೆ ಜಾಗ ಮಂಜೂರು ಮಾಡಲು ಸರ್ಕಾರದಿಂದ ಕ್ರಮ ವಹಿಸಲಾಗುತ್ತದೆ?	ಅನ್ವಯಿಸುವುದಿಲ್ಲ

(ಕಡತ ಸಂಖ್ಯೆ:ಕಂಇ 05 ಎಲ್‌ಜಿಯು 2023)

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 253

ಉತ್ತರಿಸಬೇಕಾದ ದಿನಾಂಕ : 13.02.2023

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಜಾನುವಾರುಗಳ ಚರ್ಮಗಂಟು ರೋಗ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)	1. ರಾಜ್ಯದಲ್ಲಿ ರೋಗೋದ್ರೇಕ ಕಾಣಿಸಿಕೊಂಡ ಕೂಡಲೇ ಜಾನುವಾರುಗಳ ಸಾಗಾಣಿಕೆಯನ್ನು ನಿರ್ಬಂಧಿಸಲು ಆಯಾ ಜಿಲ್ಲಾಧಿಕಾರಿಗಳಿಂದ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. 2. ಚರ್ಮಗಂಟು ರೋಗವು ಸೊಳ್ಳೆ, ನೊಣ ಇತ್ಯಾದಿ ಕೀಟಗಳಿಂದ ಪಸರಿಸುವುದರಿಂದ ರೋಗ ನಿಯಂತ್ರಣಕ್ಕಾಗಿ ಸೊಳ್ಳೆ, ನೊಣ ಇತ್ಯಾದಿ ಕೀಟಗಳ ಹತೋಟಿಗಾಗಿ ಪಂಚಾಯತಿ ವ್ಯಾಪ್ತಿಯಲ್ಲಿನ ಎಲ್ಲಾ ಗ್ರಾಮಗಳಲ್ಲಿ ಫಾಗಿಂಗ್ ಮತ್ತು ಸ್ಪ್ರೇ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಸುತ್ತೋಲೆ ಹೊರಡಿಸಲಾಗಿರುತ್ತದೆ. 3. ತುರ್ತು ಚಿಕಿತ್ಸೆಗೆ ಅವಶ್ಯವಿರುವ ಔಷಧಿಗಳನ್ನು ಪೂರೈಸಲಾಗಿದೆ. ಅಲ್ಲದೇ ಪ್ರತಿ ತಾಲ್ಲೂಕಿಗೆ ಕನಿಷ್ಠ ರೂ.5.00 ಲಕ್ಷಗಳನ್ನು ಜಿಲ್ಲಾ / ತಾಲ್ಲೂಕು ಪಂಚಾಯತ್ ಅನುದಾನದಡಿ ಕಾಯ್ದಿರಿಸಲಾಗಿರುತ್ತದೆ. 4. ಜಾನುವಾರುಗಳ ಸಾಗಾಟ, ಮಾರಾಟ ಮತ್ತು ಸಂತೆ, ಜಾತ್ರೆಗಳನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. 5. ರೈತರಿಗೆ ಸದರಿ ರೋಗದ ಬಗ್ಗೆ ಬ್ಯಾನರ್ಸ್, ಕರಪತ್ರಗಳು, ಪತ್ರಿಕಾ ಪ್ರಕಟಣೆ, ಸಮೂಹ ಮಾಧ್ಯಮಗಳ ಮೂಲಕ ರೋಗದ ಬಗ್ಗೆ ಮಾಹಿತಿಯನ್ನು ನೀಡಿ ರೈತರಿಗೆ ರೋಗ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅರಿವು ಮೂಡಿಸಲಾಗಿದೆ. 6. ರಾಜ್ಯದ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು ಇಲ್ಲಿ ಕೂಡಲೇ ಚರ್ಮಗಂಟು ರೋಗದ ನಿಯಂತ್ರಣಕ್ಕೆ ಅಗತ್ಯವಿರುವ ಲಸಿಕೆಯನ್ನು ಉತ್ಪಾದಿಸಲು ಕ್ರಮ ಕೈಗೊಳ್ಳಲಾಗಿದೆ ಮತ್ತು 35.74 ಲಕ್ಷ ಡೋಸ್‌ಗಳ ಲಸಿಕೆಯನ್ನು ವಿವಿಧ ಜಿಲ್ಲೆಗಳಿಗೆ ಈಗಾಗಲೇ ಸರಬರಾಜು ಮಾಡಲಾಗಿದೆ. ಅಲ್ಲದೇ ಜಿಲ್ಲೆಯ ಉಪ ನಿರ್ದೇಶಕರುಗಳು ಖಾಸಗಿ ಸಂಸ್ಥೆಯಿಂದ ಲಸಿಕೆಯನ್ನು ಖರೀದಿಸಿ ರೋಗ ನಿಯಂತ್ರಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ. ಕೇಂದ್ರ ಕಛೇರಿಯಿಂದ 37.5 ಲಕ್ಷ ಡೋಸ್ ಲಸಿಕೆಯನ್ನು ಭಾರತ ಸರ್ಕಾರದಿಂದ ದರ ನಿಗಧಿಪಡಿಸಲಾಗಿರುವ ಸಂಸ್ಥೆಗಳಿಂದ ಖರೀದಿಸಿ ಪೂರೈಸಲಾಗಿದೆ. ಅಲ್ಲದೇ ಜಿಲ್ಲಾ ಮಟ್ಟದಲ್ಲಿ ಮತ್ತು ಕೆಎಂಎಫ್ ವತಿಯಿಂದ 30 ಲಕ್ಷ ಡೋಸ್ ಲಸಿಕೆಯನ್ನು ಖರೀದಿಸಲಾಗಿರುತ್ತದೆ. ದಿನಾಂಕ:06.02.2023 ರವರೆಗೆ ರಾಜ್ಯದಲ್ಲಿ ಒಟ್ಟು 10109721 ಜಾನುವಾರುಗಳಿಗೆ ಲಸಿಕೆ ನೀಡಲಾಗಿರುತ್ತದೆ.

<table>
<tr>
<td>ಆ</td>
<td>ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಪ್ರಕರಣಗಳು ಪತ್ತೆಯಾಗಿವೆ;
(ತಾಲ್ಲೂಕುವಾರು ವಿವರ ನೀಡುವುದು)</td>
<td>ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 3075 ಜಾನುವಾರುಗಳು ಚರ್ಮಗಂಟು ರೋಗಕ್ಕೆ ತುತ್ತಾಗಿರುತ್ತವೆ.
ವಿವರ ಈ ಕೆಳಕಂಡಂತಿದೆ:
<table>
<tr><th>ತಾಲ್ಲೂಕಗಳ ಹೆಸರು</th><th>ಪ್ರಕರಣಗಳು</th></tr>
<tr><td>ಶೃಂಗೇರಿ</td><td>340</td></tr>
<tr><td>ನರಸಿಂಹರಾಜಪುರ</td><td>869</td></tr>
<tr><td>ಕೊಪ್ಪ</td><td>1716</td></tr>
<tr><td>ಚಿಕ್ಕಮಗಳೂರು
(ಶೃಂಗೇರಿ ಕ್ಷೇತ್ರಕ್ಕೆ ಒಳಗೊಂಡಿರುವ ಹಳ್ಳಿಗಳು)</td><td>150</td></tr>
</table>
</td>
</tr>
<tr>
<td>ಇ</td>
<td>ಸರ್ಕಾರದಿಂದ ರೋಗ ನಿವಾರಣೆಗೆ ಮಂಜೂರು ಮಾಡಿರುವ ಹಾಗೂ ಬಿಡುಗಡೆ ಮಾಡಿರುವ ಅನುದಾನವೆಷ್ಟು;
(ವಿವರ ನೀಡುವುದು)</td>
<td>2022–23ನೇ ಸಾಲಿನಲ್ಲಿ ರಾಜ್ಯದಲ್ಲಿನ ಜಾನುವಾರುಗಳ ಚಿಕಿತ್ಸೆಗಾಗಿ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸಲು ರಾಜ್ಯ ವಲಯದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.1262.00 ಲಕ್ಷ ಅನುದಾನ ಹಾಗೂ ಜಿಲ್ಲಾ ವಲಯದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.5439.03 ಲಕ್ಷಗಳ ಅನುದಾನ ನಿಗದಿಪಡಿಸಲಾಗಿರುತ್ತದೆ. (ಜಿಲ್ಲಾವಾರು ವಿವರ <u>ಅನುಬಂಧದಲ್ಲಿ ನೀಡಿದೆ)</u>

ನಿಗದಿಪಡಿಸಿದ ಅನುದಾನದಲ್ಲಿ ರಾಜ್ಯ ವಲಯದ ಲೆಕ್ಕ ಶೀರ್ಷಿಕೆ ಅಡಿ ರೂ.608.81 ಲಕ್ಷ ಅನುದಾನ ಹಾಗೂ ಜಿಲ್ಲಾ ವಲಯದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.2463.85 ಲಕ್ಷಗಳ ಅನುದಾನದಲ್ಲಿ ಈಗಾಗಲೇ ಔಷಧಿ ಮತ್ತು ರಾಸಾಯನಿಕಗಳನ್ನು ಪೂರೈಸಲು ಕ್ರಮಕೈಗೊಳ್ಳಲಾಗಿದೆ.

ಮುಂದುವರೆದು, ಚರ್ಮಗಂಟು ರೋಗದ ಚಿಕಿತ್ಸೆಗೆ ಔಷಧಿ ಮತ್ತು ಪೂರಕ ರಾಸಾಯನಿಕಗಳನ್ನು ಖರೀದಿಸಲು ರೂ.30.00 ಲಕ್ಷಗಳ ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆಗೊಳಿಸಲಾಗಿದೆ. ಅಲ್ಲದೇ, ತಲಾ ರೂ.5.00 ಲಕ್ಷಗಳಂತೆ ಜಿಲ್ಲೆ/ತಾಲ್ಲೂಕು ಪಂಚಾಯತ್ ವಂಟನದಡಿ ಅನುದಾನವನ್ನು ಕಾಯ್ದಿರಿಸಿಕೊಳ್ಳಲು ಸೂಚನೆ ನೀಡಲಾಗಿದೆ.

ಕೇಂದ್ರ ಸರ್ಕಾರದ ಅನುದಾನದಲ್ಲಿ ಪ್ರತಿ ಡೋಸ್‌ಗೆ ರೂ.5.25ರಂತೆ 37.5 ಲಕ್ಷ ಲಸಿಕೆಗಳನ್ನು ಖರೀದಿಸಿ ಜಿಲ್ಲೆಗಳಿಗೆ ವಿತರಿಸಲಾಗಿದೆ.

ರಾಜ್ಯದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಹೆಬ್ಬಾಳ, ಬೆಂಗಳೂರು ರವರಿಂದ 35.74 ಲಕ್ಷ ಡೋಸ್ ಲಸಿಕೆಯನ್ನು ರಾಜ್ಯ ಸರ್ಕಾರದಿಂದ ಜಿಲ್ಲೆಗಳಿಗೆ ವಿತರಿಸಲಾಗಿದೆ.</td>
</tr>
<tr>
<td>ಈ</td>
<td>ಚಿಕ್ಕಮಗಳೂರು ಜಿಲ್ಲೆಗೆ ಗುರಿಗನುಗುಣವಾಗಿ ಲಸಿಕೆ ಪೂರೈಕೆಯಾಗಿದೆಯೇ;
(ತಾಲ್ಲೂಕುವಾರು ವಿವರ ನೀಡುವುದು)</td>
<td>ಹೌದು, ಪೂರೈಸಲಾಗಿದೆ.</td>
</tr>
</table>

ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕುಗಳಿಗೆ ಚರ್ಮಗಂಟು ಲಸಿಕೆ ಪೂರೈಸಿದ ವಿವರ			
ಕ್ರ.ಸಂ.	ತಾಲ್ಲೂಕು	ಜಾನುವಾರುಗಳ ಸಂಖ್ಯೆ (ದನ ಮತ್ತು ಎಮ್ಮೆ	ಪೂರೈಕೆಯಾಗಿರುವ ಲಸಿಕೆ (ಡೋಸ್‌ಗಳಲ್ಲಿ)
1	ಚಿಕ್ಕಮಗಳೂರು	66001	62000
2	ಕಡೂರು	85231	69300
3	ನರಸಿಂಹರಾಜಪುರ	31385	37000
4	ಅಜ್ಜಂಪುರ	60840	36000
5	ತರೀಕೆರೆ		49000
6	ಮೂಡಿಗೆರೆ	26578	30000
7	ಶೃಂಗೇರಿ	17043	22700
8	ಕೊಪ್ಪ	37291	39000
	ಒಟ್ಟು	324369	345000

ಉ	ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲಿಯವರೆಗೂ ಎಷ್ಟು ಲಸಿಕೆಗಳನ್ನು ಪೂರೈಸಲಾಗಿದೆ; ಪೂರೈಸಲು ಬಾಕಿ ಇರುವ ಲಸಿಕೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)	ಚಿಕ್ಕಮಗಳೂರು ಜಿಲ್ಲೆಯಲ್ಲಿ ದಿನಾಂಕ:06-02-2023 ರವರೆಗೆ 2,73,658 ಜಾನುವಾರುಗಳಿಗೆ ಲಸಿಕೆ ಹಾಕಲಾಗಿರುತ್ತದೆ. ಇನ್ನೂ 69,600 ಡೋಸ್ ಲಸಿಕೆ ದಾಸ್ತಾನು ಇರುತ್ತದೆ. ಬೇಡಿಕೆಗೆ ಅನುಗುಣವಾಗಿ ಲಸಿಕೆ ಸರಬರಾಜು ಮಾಡಿದ್ದು, ಬಾಕಿ ಇರುವುದಿಲ್ಲ.

ಇ- ಪಸಂಮೀ 23 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

ಅನುಬಂಧ

2022-23 ನೇ ಸಾಲಿನಲ್ಲಿ ಜಿಲ್ಲಾಪಂಚಾಯಿತಿಯ ಲೆಕ್ಕ ಶೀರ್ಷಿಕೆ 2403-00-101-0-27 ರಲ್ಲಿ ಔಷಧಿಗಳನ್ನು ಖರೀದಿಸಲು ಇಲ್ಲಿಯವರೆಗೆ ವೆಚ್ಚ ಮಾಡಲಾದ ಅನುದಾನದ ಜಿಲ್ಲಾವಾರು ವಿವರಗಳು.

Sl. No.	District	Budget Allocated (Rs. In Lakhs)	Budget Released (Rs. In Lakhs)	Order issued till date including all items (Medicine, LN2 & Vaccine)	Expenditure till date (Amount paid to Agencies)	Balance amount available for Indent against Budget Allocation
1	2	3	4	5	6	7
	BENGALURU DIVISION					
1	BENGALURU RURAL	130.52	97.89	100.62	81.62	29.90
2	BENGALURU URBAN	92.00	69.00	31.96	41.04	60.04
3	CHITRADURGA	125.00	93.75	93.05	66.27	31.95
4	CHIKKABALLAPURA	178.00	133.50	133.50	115.00	44.50
5	DAVANAGERE	124.00	93.00	84.79	84.79	39.21
6	KOLAR	120.00	90.00	92.00	66.53	28.00
7	RAMANAGARA	140.00	105.00	90.00	68.62	50.00
8	SHIVAMOGGA	186.00	139.50	120.98	66.68	65.02
9	TUMAKUR	240.00	180.00	102.71	62.61	137.29
	MYSURU DIVISION					
10	CHAMARAJANAGARA	175.00	131.25	110.66	109.50	64.34
11	CHIKKAMAGALURU	95.00	71.25	67.88	53.47	27.12
12	DAKSHINA KANNADA	125.00	93.75	70.00	59.86	55.00
13	HASSAN	185.00	138.75	134.93	59.71	50.07
14	KODAGU	70.00	52.50	60.74	6.21	9.26
15	MYSURU	154.12	115.59	106.72	60.85	47.40
16	MANDYA	210.00	157.50	130.97	130.97	79.03
17	UDUPI	70.00	52.50	50.08	30.08	19.92
	BELAGAUM DIVISION					
18	BELAGAUM	1000.00	750.00	750.00	583.00	250.00
19	BAGALKOTE	112.00	84.00	75.02	61.02	36.98
20	DHARWAD	210.00	157.50	126.00	70.65	84.00
21	GADAG	114.39	85.79	68.82	41.93	45.57
22	HAVERI	180.00	135.00	135.00	114.00	45.00
23	UTTARA KANNADA	365.00	273.75	294.75	10.25	70.25
24	VIJAYAPURA	180.00	135.00	87.04	45.04	92.96
	KALABURGI DIVISION					
25	BALLARI	135.00	101.25	101.00	75.00	34.00
26	BIDAR	160.00	120.00	106.64	86.02	53.37
27	KOPPAL	130.00	97.50	92.53	92.53	37.47
28	KALABURGI	130.00	97.50	84.41	2.12	45.59
29	RAICHUR	153.00	114.75	114.48	47.48	38.52
30	YADAGIRI	90.00	67.50	67.50	62.50	22.50
31	VIJAYANAGARA	60.00	45.00	45.00	8.50	15.00
	TOTAL	5,439.03	4,079.27	3,729.78	2463.85	1709.26

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	254
ಸದಸ್ಯರ ಹೆಸರು	ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
ಉತ್ತರಿಸಬೇಕಾದ ದಿನಾಂಕ	13.02.2023
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಹುತೇಕ ನಾಡ ಕಛೇರಿಗಳ ಕಟ್ಟಡಗಳು ಸುಸ್ಥಿತಿ ಯಲ್ಲಿರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ನಾಡಕಛೇರಿ ಗಳು ಸುಸ್ಥಿತಿಯಲ್ಲಿರುವುದಿಲ್ಲ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡು ವುದು).	ಶೃಂಗೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 08 ನಾಡಕಛೇರಿಗಳು ಕಾರ್ಯನಿರ್ವಹಿಸುತ್ತಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ತಾಲ್ಲೂಕು	ನಾಡಕಛೇರಿಗಳ ವಿವರ	
		ಸುಸ್ಥಿತಿ ಯಲ್ಲಿರುವ ನಾಡ ಕಛೇರಿಗಳು	ಸುಸ್ಥಿತಿಯಲ್ಲಿ ಇಲ್ಲದೇ ಇರುವ ನಾಡಕಛೇರಿಗಳು
01	ಚಿಕ್ಕಮಗಳೂರು	ಖಾಂಡ್ಯ	-
02	ನರಸಿಂಹರಾಜಪುರ	ಕಸಬಾ	ಬಾಳೆಹೊನ್ನೂರು
03	ಶೃಂಗೇರಿ	ಕಸಬಾ	ಕಿಗ್ಗಾ
04	ಕೊಪ್ಪ	ಕಸಬಾ	ಜಯಪುರ
05		-	ಹರಿಹರಪುರ

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	ಹಾಗಿದ್ದಲ್ಲಿ, ಹೊಸ ನಾಡ ಕಛೇರಿ ಕಟ್ಟಡಗಳ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿ ದೆಯೇ; (ವಿವರ ನೀಡುವುದು).	ಸುಸ್ಥಿತಿಯಲ್ಲಿ ಇಲ್ಲದೇ ಇರುವ ಬಾಳೆಹೊನ್ನೂರು ಹಾಗೂ ಕಿಗ್ಗಾ ನಾಡಕಛೇರಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಬಾಳೆಹೊನ್ನೂರು ನಾಡಕಛೇರಿಗೆ ಗುರುತಿಸಿರುವ ಜಾಗಕ್ಕೆ ಗ್ರಾಮಸ್ಥರಿಂದ ಅಕ್ಷೇಪಣೆ ಇರುವುದರಿಂದ ಹಾಗೂ ಕಿಗ್ಗಾ ನಾಡಕಛೇರಿಗೆ ಗುರುತಿಸಿರುವ ಜಾಗವು ರಾಷ್ಟ್ರೀಯ ಹೆದ್ದಾರಿ ವ್ಯಾಪ್ತಿಗೆ ಬರುವುದರಿಂದ ಕಾಮಗಾರಿಯನ್ನು ಪ್ರಾರಂಭ ಗೊಳಿಸಿರುವುದಿಲ್ಲ. ಕೊಪ್ಪ ತಾಲ್ಲೂಕು ಹರಿಹರಪುರ ಮತ್ತು ಜಯಪುರ ನಾಡಕಛೇರಿಗೆ ನೂತನ ಕಟ್ಟಡ ನಿರ್ಮಾಣಕ್ಕಾಗಿ ಆಯವ್ಯಯದಲ್ಲಿ ಒದಗಿಸುವ ಅನುದಾನವನ್ನು ಆಧರಿಸಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.
ಇ)	ಎಷ್ಟು ನಾಡಕಛೇರಿಗಳಿಗೆ ಈಗಾಗಲೇ ಜಾಗ ಮಂಜೂರು ಮಾಡಲಾಗಿದೆ; ಜಾಗ ಮಂಜೂರು ಮಾಡಲು ಬಾಕಿ ಇರುವ ನಾಡಕಛೇರಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು).	ಸುಸ್ಥಿತಿಯಲ್ಲಿಲ್ಲದೇ ಇರುವ ಎಲ್ಲಾ ನಾಡಕಛೇರಿಗಳಿಗೂ ಜಾಗ ಮಂಜೂರಾಗಿದ್ದು, ಆಕ್ಷೇಪಣೆ ಇರುವ ಈ ಕೆಳಕಂಡ ತಾಲ್ಲೂಕುಗಳ ನಾಡಕಛೇರಿಗಳಿಗೆ ಬದಲಿ ಜಾಗವನ್ನು ಗುರುತಿಸುವಂತೆ ಸಂಬಂಧಪಟ್ಟ ತಹಶೀಲ್ದಾರರಿಗೆ ಸೂಚನೆ ನೀಡಲಾಗಿರುತ್ತದೆ.

ಕ್ರ. ಸಂ	ತಾಲ್ಲೂಕು	ಸುಸ್ಥಿತಿಯಲ್ಲಿಲ್ಲದೇ ಇರುವ ನಾಡಕಛೇರಿ
01	ನರಸಿಂಹರಾಜಪುರ	ಬಾಳೆಹೊನ್ನೂರು
02	ಶೃಂಗೇರಿ	ಕಿಗ್ಗಾ

ಈ)	ನಾಡಕಛೇರಿ ಕಟ್ಟಡಗಳ ನಿರ್ಮಾಣಕ್ಕಾಗಿ ಸರ್ಕಾರದಿಂದ ಅತ್ಯಲ್ಪ ಮೊತ್ತದ ಅನುದಾನ ವನ್ನು ನೀಡಲಾಗುತ್ತಿದ್ದು, ಇದರಿಂದ ವಿಸ್ತಾರವಾದ ಹಾಗೂ ಬಹುಕೊಠಡಿಗಳನ್ನೊಳಗೊಂಡ ಕಟ್ಟಡ ನಿರ್ಮಾಣ ಮಾಡಲು ಅಸಾಧ್ಯವಾಗುತ್ತಿದ್ದು, ಕನಿಷ್ಟ 50 ಲಕ್ಷ ಅಂದಾಜು ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು).	ಈ ಹಿಂದೆ ರಾಜ್ಯದಲ್ಲಿ ಹೊಸದಾಗಿ ನಾಡಕಛೇರಿ ಕಟ್ಟಡಗಳ ನಿರ್ಮಾಣಕ್ಕೆ ಪ್ರತೀ ನಾಡಕಚೇರಿಗೆ ತಲಾ ರೂ.18.84 ಲಕ್ಷವನ್ನು ಬಿಡುಗಡೆಗೊಳಿಸಲಾಗುತ್ತಿತ್ತು. ಪ್ರಸಕ್ತ ಸಾಲಿನಿಂದ ಈ ಮೊತ್ತವನ್ನು ರೂ.20.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

ಸಂಖ್ಯೆ: ಕಂಇ 12 ಎಜೆಎಸ್ 2023

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 255
ಸದಸ್ಯರ ಹೆಸರು : ಶ್ರೀ ರಾಜೇಗೌಡ.ಟಿ.ಡಿ. (ಶೃಂಗೇರಿ)
ಉತ್ತರಿಸುವ ದಿನಾಂಕ : 13.02.2023.
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಖಾಸಗಿ ಸಂಘ ಸಂಸ್ಥೆಗಳಿಗೆ ಮಂಜೂರು ಮಾಡುವ ಬಗ್ಗೆ ನೀತಿಯನ್ನು ರೂಪಿಸಲು ಸಚಿವ ಸಂಪುಟ ಉಪ ಸಮಿತಿ ರಚಿಸಲಾಗಿದ್ದು, ಇದರಲ್ಲಿ ಕೇವಲ ಖಾಸಗಿ ಸಂಘ/ಸಂಸ್ಥೆಗಳಿಗೆ ಜಮೀನು ಮಂಜೂರು ಮಾಡುವ ಬಗ್ಗೆ ಮಾತ್ರ ನೀತಿ ರೂಪಿಸಲಾಗುತ್ತದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು)	ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಸಂಶಾ 01 ಸಿ.ಎಸ್.ಸಿ. 2022 ದಿನಾಂಕ: 29.01.2022ರಲ್ಲಿ ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಖಾಸಗಿ ಸಂಘ / ಸಂಸ್ಥೆಗಳಿಗೆ ಮಂಜೂರು ಮಾಡುವ ಕುರಿತು ಒಂದು ನೀತಿಯನ್ನು ರೂಪಿಸುವ ಸಲುವಾಗಿ ಮಾನ್ಯ ಕಂದಾಯ ಸಚಿವರ ಸಚಿವ ಸಂಪುಟದ ಉಪ ಸಮಿತಿಯನ್ನು ರೂಪಿಸಲಾಗಿತ್ತು. ತದನಂತರ, ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಸಂಶಾ 01 ಸಿ.ಎಸ್.ಸಿ. 2022, ದಿನಾಂಕ: 29.01.2022 ಅನ್ನು ದಿನಾಂಕ: 11.02.2022ರನ್ವಯ ತಿದ್ದುಪಡಿ ಮಾಡಿ "ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡುವ ಕುರಿತು ಒಂದು ನೀತಿಯನ್ನು ರೂಪಿಸಲು" ಎಂದು ತಿದ್ದುಪಡಿ ಮಾಡಲಾಗಿದೆ.
ಆ)	ಸದರಿ ಉಪ ಸಮಿತಿಯ ಕಾರ್ಯಸೂಚಿಯಲ್ಲಿ ರೈತರು, ಸಾರ್ವಜನಿಕರನ್ನು ಹೊರಗಿಡಲಾಗಿದೆಯೇ;	ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977 ನಿಯಮ 13ರನ್ವಯ ಸಚಿವರ ಸಂಪುಟವು ವಹಿಸುವ ವಿಷಯದ ಬಗ್ಗೆ ಪರಿಶೀಲಿಸಿ ಸಚಿವ ಸಂಪುಟಕ್ಕೆ ಮಾಹಿತಿ / ವರದಿ ನೀಡಲು ಸಚಿವ ಸಂಪುಟವು ಉಪ ಸಮಿತಿಗಳನ್ನು ರಚಿಸಲಾಗಿರುತ್ತದೆ. ಸದರಿ ನಿಯಮಗಳನ್ವಯ ಸಚಿವ ಸಂಪುಟ ಉಪಸಮಿತಿಯು ಮಾನ್ಯ ಸಚಿವರುಗಳನ್ನು ಮಾತ್ರ ಒಳಗೊಂಡಿರುತ್ತದೆ. ಸಚಿವರನ್ನು ಹೊರತುಪಡಿಸಿ ಬೇರೆ ಯಾರನ್ನು ಸಚಿವ ಸಂಪುಟ ಉಪಸಮಿತಿಯ ಸದಸ್ಯರನ್ನಾಗಿ ಮಾಡುವುದಿಲ್ಲ.
ಇ)	ಹಾಗಿದ್ದಲ್ಲಿ, ಸಚಿವ ಸಂಪುಟ ಉಪ ಸಮಿತಿಯಲ್ಲಿ ರೈತರು, ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳಿಗೆ ಸದಸ್ಯತ್ವವನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಕ್ರಮಗಳೇನು; (ವಿವರ ನೀಡುವುದು)	ಪ್ರಶ್ನೆ ಉದ್ಭವಿಸುವುದಿಲ್ಲ.
ಈ)	ಇದುವರೆವಿಗೂ ಸದರಿ ಸಚಿವ ಸಂಪುಟ ಉಪ ಸಮಿತಿ ಸಭೆಯನ್ನು ಎಷ್ಟು ಬಾರಿ ನಡೆಸಲಾಗಿದೆ; ಹಾಗೂ ಕೈಗೊಂಡಿರುವ ಅಭಿಪ್ರಾಯ ಅಥವಾ ನಿರ್ಣಯಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಸಚಿವ ಸಂಪುಟ ಉಪಸಮಿತಿ ಸಭೆಯು ದಿನಾಂಕ: 05.04.2022 11.10.2022 ಮತ್ತು 24.01.2023 ರಂದು ಸಭೆಯನ್ನು ನಡೆಸಿರುತ್ತದೆ. ಸಭಾ ನಡವಳಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ.

ಸಂಖ್ಯೆ: ಆರ್‌ಡಿ 09 ಎಲ್‌ಜಿಕ್ಯೂ 2023

(ಆರ್.ಅಶೋಕ)
ಕಂದಾಯ ಸಚಿವರು

[illegible]

[illegible]	255
[illegible]	[illegible]
[illegible]	13.02.2023.
[illegible]	[illegible]

[illegible]	[illegible]	[illegible]
[illegible]	[illegible]	[illegible] 01 [illegible] 2022 [illegible] 29.01.2022 [illegible] … [illegible] 01 [illegible] 2022 [illegible] 29.01.2022 [illegible] 11.02.2022 [illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible] 05.04.2022 [illegible] 11.10.2022 [illegible] 24.01.2023 [illegible]

[illegible] 09 [illegible] 2023

[illegible]

ಗೋಮಾಳ, ಗಾಯರಾಣ, ಹುಲ್ಲಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡುವ ಕುರಿತು ಒಂದ ನೀತಿಯನ್ನು ರೂಪಿಸಲು ರಚಿಸಲಾಗಿರುವ ಸಚಿವ ಸಂಪುಟದ ಉಪಸಮಿತಿಯ ಸಭೆಯು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:05.04.2022ರಂದು ಜರುಗಿದ ಸಭೆಯ ನಡವಳಿಗಳು

ಸಭೆಗೆ ಹಾಜರಿದ್ದ ಸದಸ್ಯರು/ ಅಧಿಕಾರಿಗಳು.

1. ಮಾನ್ಯ ಕಂದಾಯ ಸಚಿವರು
2. ಮಾನ್ಯ ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು.
3. ಮಾನ್ಯ ಗೃಹ ಸಚಿವರು.
4. ಮಾನ್ಯ ಪಶುಸಂಗೋಪನೆ ಸಚಿವರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
8. ಸರ್ಕಾರದ ಕಾರ್ಯದರ್ಶಿ, ಸಿಆಸುಇ (ಆಸು) ಹಾಗೂ ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ.
10. ಆಯುಕ್ತರು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
11. ಸರ್ಕಾರದ ಅಪರ ಕಾರ್ಯದರ್ಶಿ, ಕಾನೂನು ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಭೂ ಮಂಜೂರಾತಿ-1.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಭೆಯಲ್ಲಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಮೊದಲಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಗೋಮಾಳ ಜಮೀನು ಜಾನುವಾರುಗಳಿಗೆ ಮೇಯಲು ಇರುವ ಜಮೀನಾಗಿರುತ್ತದೆ. ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(1)ರನ್ವಯ ಪ್ರತಿ 100 ಜಾನುವಾರುಗಳಿಗೆ 12 ಹೆಕ್ಟೇರುಗಳಂತೆ ಪ್ರತಿಯೊಂದು ಗ್ರಾಮದ ಜಾನುವಾರುಗಳಿಗೆ ಗೋಮಾಳಗಳನ್ನು ಪ್ರತ್ಯೇಕವಾಗಿಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97ಕ್ಕೆ 2017ನೇ ಸಾಲಿನಲ್ಲಿ ತಿದ್ದುಪಡಿ ಮಾಡಿ ನಿಯಮ 97 (4-ಎ)ನ್ನು ಸೇರ್ಪಡೆ ಮಾಡಲಾಗಿದ್ದು, ಇದರನ್ವಯ ಜಿಲ್ಲಾಧಿಕಾರಿಗಳಿಗೆ ನಿಯಮ 97(1)ರಡಿ ನಿರ್ದಿಷ್ಟಪಡಿಸಿದ ಗೋಮಾಳದ ವಿಸ್ತೀರ್ಣವು ಸಾಕಷ್ಟು ಲಭ್ಯವಿಲ್ಲದಿದ್ದರೂ ಕೂಡ ಒಂದು ಬಾರಿ ಕ್ರಮವಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ಅಧ್ಯಾಯ-XIII-ಎ ಭೂಮಿಯ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸುವುದಕ್ಕೆ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಅಂದರೆ, ನಿಯಮ 97(1)ರಡಿ ನಿರ್ದಿಷ್ಟಪಡಿಸಿದ ಗೋಮಾಳದ ವಿಸ್ತೀರ್ಣವು ಸಾಕಷ್ಟು ಲಭ್ಯವಿಲ್ಲದಿದ್ದರೂ ಕೂಡ ನಮೂನೆ-50 ಮತ್ತು ನಮೂನೆ-53ರ ಅರ್ಜಿಗಳನ್ನು ಪರಿಗಣಿಸಬಹುದಾಗಿದೆ. ಆದರೆ, ಈ ವಿನಾಯಿತಿಯು ನಮೂನೆ-57 ಅರ್ಜಿಗಳಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸುತ್ತಾ, ಈ ಬಗ್ಗೆ ದಿನಾಂಕ: 24.02.2022ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ ಎಂದು ಸಮಿತಿಗೆ ತಿಳಿಸಿದರು. ಮುಂದುವರೆದು, ಸೆಕ್ಷನ್ 79 ನಲ್ಲಿ ಪ್ರಸ್ತಾಪಿತ ಜಮೀನನ್ನು Privilege land ಎಂದು ಕರೆಯಲ್ಪಡಲಾಗಿದೆ. 79(2) ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಮ್ಮಾ ಕಾಣೆ, ಬಾಣೆ ಜಮೀನು ಎಂದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಟ್ಟ ಹಾಗೂ ಹಾಡಿ ಜಮೀನು, ಮೈಸೂರು ಪ್ರಾಂತ್ಯದಲ್ಲಿ ಕಾಣಾ ಮತ್ತು ಸೊಪ್ಪಿನ ಬೆಟ್ಟ ಜಮೀನು ಎಂದು, ಕೊಡಗು ಜಿಲ್ಲೆಯಲ್ಲಿ ಜಮ್ಮಾ ಮತ್ತು ಬಾಣೆ ಜಮೀನುಗಳನ್ನು ವಿಶೇಷ ಹಕ್ಕಿನ ಜಮೀನು ಎಂದು ಗುರುತಿಸಲಾಗಿದೆ ಎಂದು ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆಯವರು ವಿಶೇಷ ಹಕ್ಕಿನ ಜಮೀನು ಎಂದರೆ Forest Act ನಲ್ಲಿ ಸೆಕ್ಷನ್ 32, 33 ರಡಿಯಲ್ಲಿ ಅರಣ್ಯ ಜಮೀನಿಗೆ ಹೊಂದಿಕೊಂಡಿರುವ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿರುವವರು ಅವರ ಪಕ್ಕದ ಕಾಡಿನ ಜಮೀನಿನಲ್ಲಿ ಸೊಪ್ಪು ಸೆದೆ ತರಲು ಹಾಗೂ ದನಕರುಗಳನ್ನು

ಮೇಯಿಸಲಿಕ್ಕೆ ವಿಶೇಷ ಹಕ್ಕನ್ನು ಕಲ್ಪಿಸಲಾಗಿರುತ್ತದೆ. ಸದರಿ ಜಮೀನಿನ ಹಕ್ಕು ಸರ್ಕಾರದಲ್ಲಿ ನಿಹಿತಗೊಂಡಿರುತ್ತದೆ ಎಂದು ಸಮಿತಿಗೆ ತಿಳಿಸಿದರು.

ಕುಮ್ಕಿ ಹಾಗೂ ಇತರ ವಿಶೇಷ ಸವಲತ್ತುಗಳ ಜಮೀನುಗಳನ್ನು ದಿನಾಂಕ: 03.05.2010ರ ಮುಂಚಿತವಾಗಿ ಮಂಜೂರು ಮಾಡಲಾಗುತ್ತಿತ್ತು, ಸಿ. ಇ. ಸಿ. ಪ್ರಕಾರ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ದಿನಾಂಕ: 11.02.2010ರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ, ಅದನ್ನು ಹಿಂಪಡೆದರೆ ಸಮಸ್ಯೆ ಪರಿಹಾರ ಆಗುತ್ತದೆ ಎಂದು ಮಾನ್ಯ ಗೃಹ ಸಚಿವರು ಸಮಿತಿಗೆ ತಿಳಿಸಿದರು.

ಮಾನ್ಯ ಕಾನೂನು ಸಚಿವರು ಮಾತನಾಡುತ್ತಾ, ಲ್ಯಾಂಡ್ ಬ್ಯಾಂಕ್ ನಿರ್ಮಾಣದ ಸಲುವಾಗಿ ಅರಣ್ಯ ಇಲಾಖೆಗೆ ಸಿ & ಡಿ ವರ್ಗದ ಜಮೀನುಗಳನ್ನು ಕಂದಾಯ ಇಲಾಖೆಯಿಂದ ವರ್ಗಾಯಿಸಲಾಗಿರುತ್ತದೆ. ಆದರೆ, ಅರಣ್ಯ ಇಲಾಖೆಯು ಸಿ & ಡಿ ಲ್ಯಾಂಡ್ ಜಮೀನಿನ ಪಕ್ಕದಲ್ಲಿರುವ ಜಮೀನನ್ನು ಸಹ ಅರಣ್ಯ ಇಲಾಖೆ ವಶಕ್ಕೆ ಪಡೆದುಕೊಂಡಿರುತ್ತದೆ. ಇದರಿಂದ ನಮೂನೆ-50, 53 & 57ರಲ್ಲಿ ಅರ್ಜಿ ಸಲ್ಲಿಸಿದ ರೈತರಿಗೆ ತುಂಬ ಅನ್ಯಾಯವಾಗಿದೆ ಎಂದು ಸಮಿತಿಗೆ ತಿಳಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರು ಮಾತನಾಡಿ ಗೋದಾವರ್ಮನ್ ಪ್ರಕರಣದಂತೆ ಅರಣ್ಯ ಸ್ವರೂಪವುಳ್ಳ ಜಮೀನುಗಳನ್ನು ಅರಣ್ಯವೆಂದು ಪರಿಭಾವಿಸಬೇಕಾಗುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ರಾಜ್ಯದಲ್ಲಿ ಒಟ್ಟು 15 ಲಕ್ಷ ಎಕರೆ ಜಮೀನು ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ನೀಡಲಾಗಿದ್ದು, ಸದರಿ ಜಮೀನಿನಲ್ಲಿ ನಮೂನೆ-50, 53 & 57ರಲ್ಲಿ ಅನಧಿಕೃತ ಸಾಗುವಳಿ ಮಾಡುತಿದ್ದು, ನಿಯಮಗಳನ್ವಯ ಅರ್ಜಿ ಸಲ್ಲಿಸಿದ್ದಲ್ಲಿ ಸಕ್ರಮಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮತೆಗೆದುಕೊಳ್ಳಬೇಕಾಗುತ್ತದೆ ಎಂದು ಮಾನ್ಯ ಗೃಹ ಸಚಿವರು ಸಭೆಯ ಗಮನಕ್ಕೆ ತಂದರು.

ಮಾನ್ಯ ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಇತ್ತೀಚಿನ ದಿನಗಳಲ್ಲಿ ಜಾನುವಾರುಗಳು ಮೇಯಲು ಗೋಮಾಳ ಜಮೀನನ್ನು ಹೆಚ್ಚಾಗಿ ಬಳಸದೇ Readymade feed ಉಪಯೋಗಿಸುತ್ತಿರುವುದರಿಂದ ಈ ಹಿಂದೆ ನಿಗದಿಪಡಿಸಿರುವ ಗೋಮಾಳ ಶೀರ್ಷಿಕೆಯನ್ನು ಪುನರ್ ಪರಿಶೀಲಿಸಬೇಕಾಗುತ್ತದೆ ಎಂದು ತಿಳಿಸಿದರು.

ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ ಇವರು ಗೋಮಾಳ ಜಮೀನು ಹಾಗೂ ಕುಮ್ಕಿ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಅನೇಕ ತೀರ್ಪುಗಳು ಇರುವುದಾಗಿ ತಿಳಿಸಿದರು.

ಮಾನ್ಯ ಪಶುಸಂಗೋಪನೆ ಸಚಿವರು ರಾಜ್ಯದಲ್ಲಿ ಗೋಶಾಲೆಗಳನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿರುವುದರಿಂದ ಮೊದಲಿಗೆ ಗೋಶಾಲೆಗೆ ಅಗತ್ಯವಿರುವ ಗೋಮಾಳ ಜಮೀನನ್ನು ಕಾಯ್ದಿರಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಸಭೆಯ ಗಮನಕ್ಕೆ ತಂದರು.

ಸದರಿ ವಿಷಯದ ಕುರಿತು, ಸುಧೀರ್ಘವಾಗಿ ಚರ್ಚಿಸಿದ ನಂತರ, ಈ ಕೆಳಕಂಡಂತೆ ಕ್ರಮವಹಿಸಲು ಸಮಿತಿಯು ನಿರ್ಧರಿಸಿತು.

1. ಸೇಂದಿವನ ಜಮೀನುಗಳಲ್ಲಿ ನಮೂನೆ-50ರಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಗಳನ್ನು ತಿರಸ್ಕರಿಸಿರುವ ಕಾರಣಗಳಿಂದ ಮತ್ತೊಮ್ಮೆ ಪರಿಗಣಿಸಲು ಕ್ರಮವಹಿಸುವುದು

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)

2. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97ಕ್ಕೆ 2017ನೇ ಸಾಲಿನಲ್ಲಿ ತಿದ್ದುಪಡಿ ಮಾಡಿ ನಿಯಮ 97 (4-ಎ)ನ್ನು ಸೇರ್ಪಡೆ ಮಾಡಿದ ನಂತರ ನಮೂನೆ-50 ಮತ್ತು 53 ರಲ್ಲಿ ಗೋಮಾಳ ಜಮೀನು ಕಡಿಮೆ ಇರುವ ಕಾರಣದಿಂದ ತಿರಸ್ಕರಿಸಿರುವ ಅರ್ಜಿಗಳನ್ನು ಪುನಃ ಪರಿಗಣಿಸಿ ಮಂಜೂರಾತಿ ನೀಡಲು ಪರಿಶೀಲಿಸುವುದು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)

3. ಸಿ ಮತ್ತು ಡಿ ಗೆ ಸೇರಿದ 15 ಲಕ್ಷ ಎಕರೆ ಜಮೀನುಗಳನ್ನು ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ವಾಪಸ್ಸು ನೀಡಿರುವ ಬಗ್ಗೆ ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ಮಾಹಿತಿ ನೀಡುವುದು .

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ)

4. ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ನೀಡಿರುವ ಸಿ ಮತ್ತು ಡಿ ಜಮೀನುಗಳ ಪೈಕಿ ಅರಣ್ಯ ಇಲಾಖೆಯು ಉಪಯೋಗಿಸದಿರುವ ಜಮೀನುಗಳನ್ನು ಕಂದಾಯ ಇಲಾಖೆಗೆ ಹಿಂದಿರುಗಿಸುವುದು.

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ)

5. ಕುಮ್ಕಿ ಬಾನೆ, ಹುಲ್ಲುಬನ್ನಿ ಸೊಪ್ಪಿನಬೆಟ್ಟ ಇತ್ಯಾದಿ ಜಮೀನುಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ನೀಡಿರುವ ತೀರ್ಪಿನ ಬಗ್ಗೆ ಹಾಗೂ ಸದರಿ ಜಮೀನುಗಳ ವ್ಯಾಖ್ಯಾನಗಳ ಬಗ್ಗೆ ಅಭಿಪ್ರಾಯ ನೀಡುವುದು ಹಾಗೂ ಇಂತಹ ಜಮೀನುಗಳನ್ನು ಅನಧಿಕೃತ ಸಾಗುವಳಿದಾರರಿಗೆ ಸಕ್ರಮ ಮಾಡಲು ಕಾನೂನಿನ ಅಡಚಣೆ ಅಥವಾ ತೊಡಕುಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸಲು ಏನು ಕ್ರಮಕೈಗೊಳ್ಳಬೇಕು ಎಂಬ ಬಗ್ಗೆ ಸಲಹೆ ನೀಡುವುದು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ)

6. ಒಂದು ಕುಟುಂಬ ನಮೂನೆ-50 ಅಥವಾ 53ರಲ್ಲಿ ಅನಧಿಕೃತ ಸಾಗುವಳಿ ಸಕ್ರಮ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಕುಟುಂಬವು ಗರಿಷ್ಠ ಹಿಡುವಳಿ ಜಮೀನು ಹೊಂದಿದ್ದ ಕಾರಣ ಅವರ ಅರ್ಜಿಗಳು ತಿರಸ್ಕೃತಗೊಂಡಿದ್ದು, ಅದೇ ಕುಟುಂಬದ ವಾರಸ್ಸುದಾರ ನಮೂನೆ-57ರಲ್ಲಿ ಅರ್ಜಿ ಸಲ್ಲಿಸಿದ್ದು ಹಾಗೂ ಅರ್ಜಿಯನ್ನು ಇತ್ಯರ್ಥಪಡಿಸಲು ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ ನಮೂನೆ-57ರಲ್ಲಿ ಅಂತಹ ವಾರಸ್ಸುದಾರರ ಅರ್ಜಿಯನ್ನು ಪರಿಗಣಸಲು ಅವಕಾಶವಿರುವ ಬಗ್ಗೆ ಪರಿಶೀಲಿಸುವುದು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿ ಕಾನೂನು ಇಲಾಖೆ).

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಆರ್. ಅಶೋಕ)
ಕಂದಾಯ ಸಚಿವರು

ಸಂಖ್ಯೆ: ಆರ್.ಡಿ. 05 ಎಲ್.ಜಿ.ಪಿ. 2022

ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಮಂಜೂರು ಮಾಡುವ ಕುರಿತು ಒಂದು ನೀತಿಯನ್ನು ರೂಪಿಸಲು ರಚಿಸಲಾಗಿರುವ ಸಚಿವ ಸಂಪುಟದ ಉಪಸಮಿತಿಯ ಸಭೆಯು ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:11.10.2022ರಂದು ಜರುಗಿದ ಸಭೆಯ ನಡವಳಿಗಳು

ಸಭೆಗೆ ಹಾಜರಿದ್ದ ಸದಸ್ಯರು/ ಅಧಿಕಾರಿಗಳು.

1. ಮಾನ್ಯ ಕಂದಾಯ ಸಚಿವರು
2. ಮಾನ್ಯ ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು.
3. ಮಾನ್ಯ ಗೃಹ ಸಚಿವರು.
4. ಮಾನ್ಯ ನಗರಾಭಿವೃದ್ಧಿ ಸಚಿವರು.
5. ಮಾನ್ಯ ಪಶುಸಂಗೋಪನೆ ಸಚಿವರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕು ಇಲಾಖೆ
11. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ.
12. ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.
13. ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ.
14. ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
15. ಸರ್ಕಾರದ ಅಪರ ಕಾರ್ಯದರ್ಶಿ, ಕಾನೂನು ಇಲಾಖೆ.
16. ಸರ್ಕಾರದ ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ, (ಭೂ ಮಂಜೂರಾತಿ, ಭೂ ಕಂದಾಯ ಹಾಗೂ ಭೂ ಸುಧಾರಣೆ)
17. ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಭೂ ಮಂಜೂರಾತಿ-1.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಭೆಯಲ್ಲಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿದರು.

ಮೊದಲಿಗೆ ದಿನಾಂಕ: 05.04.2022ರಂದು ನಡೆದ ಸಭೆಯ ನಡವಳಿಯಲ್ಲಿ ನೀಡಿದ ನಿರ್ದೇಶನದಂತೆ ಕ್ರಮವಹಿಸಲಾಗಿರುವ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಭೆಗೆ ಈ ಕೆಳಕಂಡಂತೆ ಮಾಹಿತಿಯನ್ನು ನೀಡಿದರು.

ವಿಷಯ-1 : ಸೇಂದಿವನ ಜಮೀನುಗಳಲ್ಲಿ ನಮೂನೆ-50ರಲ್ಲಿ ಅರ್ಜಿ ಸಲ್ಲಿಸಿದ್ದು ಸದರಿ ಅರ್ಜಿಗಳನ್ನು ತಿರಸ್ಕರಿಸಿರುವ ಕಾರಣಗಳಿಂದ ಮತ್ತೊಮ್ಮೆ ಪರಿಗಣಿಸಲು ಕ್ರಮವಹಿಸುವುದು.

ಅನುಪಾಲನಾ ಕ್ರಮ: ಸೇಂದಿವನ ಜಮೀನುಗಳನ್ನು ನಮೂನೆ-50ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಗಳನ್ನು ಈಗಾಗಲೇ ತಿರಸ್ಕರಿಸುವುದರಿಂದ ಅವುಗಳನ್ನು ಮತ್ತೊಮ್ಮೆ ಪರಿಗಣಿಸಲು ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108(ಎಫ್)ಕ್ಕೆ ತಿದ್ದುಪಡಿ ಮಾಡಿ ಉಪನಿಯಮ (vii)ನ್ನು ಸೇರ್ಪಡೆ ಮಾಡಲು ಪರಿಶೀಲಿಸಲಾಗುತ್ತಿದೆ ಎಂದು ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಭೆಗೆ ತಿಳಿಸಿದರು.

ವಿಷಯ:-2 : ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97ಕ್ಕೆ 2017ನೇ ಸಾಲಿನಲ್ಲಿ ತಿದ್ದುಪಡಿ ಮಾಡಿ ನಿಯಮ 97 (4-ಎ)ನ್ನು ಸೇರ್ಪಡೆ ಮಾಡಿದ ನಂತರ ನಮೂನೆ-50 ಮತ್ತು 53 ರಲ್ಲಿ ಗೋಮಾಳ ಜಮೀನು ಕಡಿಮೆ ಇರುವ ಕಾರಣದಿಂದ ತಿರಸ್ಕರಿಸಿರುವ ಅರ್ಜಿಗಳನ್ನು ಪುನಃ ಪರಿಗಣಿಸಿ ಮಂಜೂರಾತಿ ನೀಡಲು ಪರಿಶೀಲಿಸುವುದು.

ಅನುಪಾಲನಾ ಕ್ರಮ: ದಿನಾಂಕ:16.02.2017ರ ನಂತರ ನಮೂನೆ-50 ಮತ್ತು ನಮೂನೆ-53ರಲ್ಲಿ ಬಾಕಿ ಇರುವ ಅರ್ಜಿಗಳನ್ನು ಸಮಿತಿಯು ಇತ್ಯರ್ಥಪಡಿಸುವಾಗ ಗೋಮಾಳ ಜಮೀನು ಕಡಿಮೆ ಇದೆ ಎನ್ನುವ ಕಾರಣದಿಂದ ಅರ್ಜಿಗಳನ್ನು ತಿರಸ್ಕರಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ಪುನಃ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ

ನಿಯಮ 108ಸಿ ಮತ್ತು 108ಸಿಸಿ ರನ್ವಯ ಪರಿಶೀಲಿಸಿ, ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸುವ ಸುತ್ತೋಲೆಯು ಪರಿಶೀಲನೆಯಲ್ಲಿದೆ ಎಂದು ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಭೆಗೆ ತಿಳಿಸಿದರು.

ವಿಷಯ-3: ಸಿ ಮತ್ತು ಡಿ ಗೆ ಸೇರಿದ 15 ಲಕ್ಷ ಎಕರೆ ಜಮೀನುಗಳನ್ನು ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ವಾಪಸ್ಸು ನೀಡಿರುವ ಬಗ್ಗೆ ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ಮಾಹಿತಿ ನೀಡುವುದು.

ವಿಷಯ-4 : ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ನೀಡಿರುವ ಸಿ ಮತ್ತು ಡಿ ಜಮೀನುಗಳ ಪೈಕಿ ಅರಣ್ಯ ಇಲಾಖೆಯು ಉಪಯೋಗಿಸದಿರುವ ಜಮೀನುಗಳನ್ನು ಕಂದಾಯ ಇಲಾಖೆಗೆ ಹಿಂದಿರುಗಿಸುವುದು.

ಅನುಪಾಲನಾ ಕ್ರಮ: ಈಗಾಗಲೇ ಸಿ & ಡಿ ಜಮೀನುಗಳು ಕಂದಾಯ ಇಲಾಖೆಗೆ ವರ್ಗಾಯಿಸಲಾಗಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರು ಸಭೆ ತಿಳಿಸಿದರು.

ಸದರಿ ಜಮೀನುಗಳನ್ನು ಕಂದಾಯ ಇಲಾಖೆಗೆ ವರ್ಗಾಯಿಸಿರುವ ಬಗ್ಗೆ ಹೊರಡಿಸಲಾದ ಆದೇಶದ ಪ್ರತಿಯನ್ನು ಒದಗಿಸಲು ಅರಣ್ಯ ಇಲಾಖೆಗೆ ನಿರ್ದೇಶನ ನೀಡಲಾಯಿತು.

ವಿಷಯ-5: ಕುಮ್ಕಿ ಬಾನೆ, ಹುಲ್ಲುಬನ್ನಿ, ಸೊಪ್ಪಿನಬೆಟ್ಟ ಇತ್ಯಾದಿ ಜಮೀನುಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ನೀಡಿರುವ ತೀರ್ಪಿನ ಬಗ್ಗೆ ಹಾಗೂ ಸದರಿ ಜಮೀನುಗಳ ವ್ಯಾಖ್ಯಾನಗಳ ಬಗ್ಗೆ ಅಭಿಪ್ರಾಯ ನೀಡುವುದು ಹಾಗೂ ಇಂತಹ ಜಮೀನುಗಳನ್ನು ಅನಧಿಕೃತ ಸಾಗುವಳಿದಾರರಿಗೆ ಸಕ್ರಮ ಮಾಡಲು ಕಾನೂನಿನ ಅಡಚಣೆ ಅಥವಾ ತೊಡಕುಗಳನ್ನು ಗುರುತಿಸಿ ಅವುಗಳನ್ನು ಬಗೆಹರಿಸಲು ಏನು ಕ್ರಮಕೈಗೊಳ್ಳಬೇಕು ಎಂಬ ಬಗ್ಗೆ ಕಾನೂನು ಇಲಾಖೆಯು ಕಂದಾಯ ಇಲಾಖೆಗೆ ಅಭಿಪ್ರಾಯವನ್ನು ನೀಡುವುದು.

ವಿಷಯ-6: ಒಂದು ಕುಟುಂಬ ನಮೂನೆ-50 ಅಥವಾ 53ರಲ್ಲಿ ಅನಧಿಕೃತ ಸಾಗುವಳಿ ಸಕ್ರಮ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಕುಟುಂಬವು ಗರಿಷ್ಠ ಹಿಡುವಳಿ ಜಮೀನು ಹೊಂದಿದ್ದ ಕಾರಣ ಅವರ ಅರ್ಜಿಗಳು ತಿರಸ್ಕೃತಗೊಂಡಿದ್ದು, ಅದೇ ಕುಟುಂಬದ ವಾರಸ್ಸುದಾರ ನಮೂನೆ-57ರಲ್ಲಿ ಅರ್ಜಿ ಸಲ್ಲಿಸಿದ್ದು ಹಾಗೂ ಅರ್ಜಿಯನ್ನು ಇತ್ಯರ್ಥಪಡಿಸಲು ಎಲ್ಲಾ ಷರತ್ತುಗಳನ್ನು ಪೂರೈಸಿದ್ದಲ್ಲಿ ನಮೂನೆ-57ರಲ್ಲಿ ಅಂತಹ ವಾರಸ್ಸುದಾರರ ಅರ್ಜಿಯನ್ನು ಪರಿಗಣಿಸಲು ಅವಕಾಶವಿರುವ ಬಗ್ಗೆ ಕಾನೂನು ಇಲಾಖೆಯು ಕಂದಾಯ ಇಲಾಖೆಗೆ ಅಭಿಪ್ರಾಯವನ್ನು ನೀಡುವುದು.

ಅನುಪಾಲನಾ ಕ್ರಮ: ಕಾನೂನು ಇಲಾಖೆಯು ಕಂದಾಯ ಇಲಾಖೆಯ ಯಾವುದೇ ಮಾಹಿತಿ ಅಭಿಪ್ರಾಯವನ್ನು ನೀಡದಿರುವುದನ್ನು ಮಾನ್ಯ ಕಾನೂನು ಸಚಿವರು ಅಸಮಾಧಾನ ವ್ಯಕ್ತಪಡಿಸಿ ಕೂಡಲೇ ಸೂಕ್ತ ಅಭಿಪ್ರಾಯವನ್ನು ನೀಡುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ ಇವರಿಗೆ ನಿರ್ದೇಶನ ನೀಡಿದರು.

ಮುಂದುವರೆದು, **ವಿಷಯ-6**ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 108ಸಿ ಮತ್ತು 108ಸಿಸಿ ರನ್ವಯ ಪರಿಶೀಲಿಸಿ, ಅರ್ಹ ಅರ್ಜಿಗಳನ್ನು ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸುವ ಸುತ್ತೋಲೆಯು ಪರಿಶೀಲನೆಯಲ್ಲಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಭೆಗೆ ತಿಳಿಸಿದರು.

ವಿಷಯ-7: ಗೋಮಾಳ ಲಭ್ಯತೆಯ ಬಗ್ಗೆ ನಡೆದ ಚರ್ಚೆಯಲ್ಲಿ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(1)ರನ್ವಯ ಪ್ರತಿ 100 ಜಾನುವಾರುಗಳಿಗೆ 12 ಹೆಕ್ಟೇರುಗಳಂತೆ ಪ್ರತಿಯೊಂದು ಗ್ರಾಮದ ಜಾನುವಾರುಗಳಿಗೆ ಗೋಮಾಳಗಳನ್ನು ಪ್ರತ್ಯೇಕವಾಗಿಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 97ಕ್ಕೆ 2017ನೇ ಸಾಲಿನಲ್ಲಿ ತಿದ್ದುಪಡಿ ಮಾಡಿ ನಿಯಮ 97 (4-ಎ)ನ್ನು ಸೇರ್ಪಡೆ ಮಾಡಲಾಗಿದ್ದು, ಇದರನ್ವಯ ಜಿಲ್ಲಾಧಿಕಾರಿಗಳಿಗೆ ನಿಯಮ 97(1)ರಡಿ ನಿರ್ದಿಷ್ಟಪಡಿಸಿದ ಗೋಮಾಳದ ವಿಸ್ತೀರ್ಣವು ಸಾಕಷ್ಟು ಲಭ್ಯವಿಲ್ಲದಿದ್ದರೂ ಕೂಡ ಒಂದು ಬಾರಿ ಕ್ರಮವಾಗಿ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ಅಧ್ಯಾಯ-XIII-ಎ ಭೂಮಿಯ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸುವುದಕ್ಕೆ ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ. ಅಂದರೆ, ನಿಯಮ 97(1)ರಡಿ ನಿರ್ದಿಷ್ಟಪಡಿಸಿದ ಗೋಮಾಳದ ವಿಸ್ತೀರ್ಣವು ಸಾಕಷ್ಟು ಲಭ್ಯವಿಲ್ಲದಿದ್ದರೂ ಕೂಡ ನಮೂನೆ-50 ಮತ್ತು ನಮೂನೆ-53ರ

ಅರ್ಜಿಗಳನ್ನು ಪರಿಗಣಿಸಬಹುದಾಗಿದೆ. ಆದರೆ, ಈ ವಿನಾಯ್ತಿಯು ನಮೂನೆ-57 ಅರ್ಜಿಗಳಿಗೆ ಅನ್ವಯಿಸುವುದಿಲ್ಲವೆಂದು ದಿನಾಂಕ: 24.02.2022ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ಸಮಿತಿಗೆ ತಿಳಿಸಿದರು. ಈ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಗಿ ಲಭ್ಯವಿರುವ ಗೋಮಾಳ ಜಮೀನುಗಳ ಬಗ್ಗೆ ಸರ್ವೆ ಮಾಡಿಸಲು ಸಮಿತಿಯು ನಿರ್ದೇಶನ ನೀಡಿತು.

(ಕ್ರಮ: ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ಎಲ್ಲಾ ಜಿಲ್ಲಾಧಿಕಾರಿಗಳು).

ವಿಷಯ: 8:- ಕುಮ್ಕಿ, ಕಾಣೆ, ಬಾಣೆ, ಜಮ್ಮಾ, ಸೊಪ್ಪಿನಬೆಟ್ಟಇತ್ಯಾದಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 79 ನಲ್ಲಿ ಪ್ರಸ್ತಾಪಿತ ಜಮೀನನ್ನು Privilege land ಎಂದು ಕರೆಯಲ್ಪಡಲಾಗಿದೆ. ಕಲಂ 79(2) ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಮ್ಮಾ, ಕಾಣೆ, ಬಾಣೆ ಜಮೀನು ಎಂದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಟ್ಟ ಹಾಗೂ ಹಾಡಿ ಜಮೀನು, ಮೈಸೂರು ಪ್ರಾಂತ್ಯದಲ್ಲಿ ಕಾಣಾ ಮತ್ತು ಸೊಪ್ಪಿನ ಬೆಟ್ಟ ಜಮೀನು ಎಂದು, ಕೊಡಗು ಜಿಲ್ಲೆಯಲ್ಲಿ ಜಮ್ಮಾ ಮತ್ತು ಬಾಣೆ ಜಮೀನುಗಳನ್ನು ವಿಶೇಷ ಹಕ್ಕಿನ ಜಮೀನು ಎಂದು ಗುರುತಿಸಲಾಗಿದೆ ಎಂದು ಮಾನ್ಯ ಕಾನೂನು ಸಚಿವರು ತಿಳಿಸಿದರು.

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 79(2) ರಲ್ಲಿರುವ ವಿಶೇಷಾಧಿಕಾರಗಳನ್ನು ಮುಂದುವರಿಸುತ್ತಾ ಅವುಗಳನ್ನು ಅಧಿಭೋಗದಾರರಿಗೆ ಮಂಜೂರು ಮಾಡುವ ಬಗ್ಗೆ ಕಲಂ 79(2)ಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಕಂದಾಯ ಇಲಾಖೆಗೆ ಅಭಿಪ್ರಾಯ / ಸಲಹೆಯನ್ನು ನೀಡಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಇಲಾಖೆ ಹಾಗೂ ಕಾನೂನು ಇಲಾಖೆ).

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಆರ್. ಅಶೋಕ)
ಕಂದಾಯ ಸಚಿವರು.

ಸಂಖ್ಯೆ: ಆರ್.ಡಿ. 05 ಎಲ್.ಜಿ.ಪಿ. 2022

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 257
ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 13.02.2023

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಹೊಸ ತಾಲ್ಲೂಕಗಳಲ್ಲಿ ತಾಲ್ಲೂಕು ಆಡಳಿತ ಸೌಧ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 100 ಡಬ್ಲ್ಯೂಬಿಆರ್ 2017; ದಿನಾಂಕ:31.10.2017 ರಲ್ಲಿ ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿ ತಾಲ್ಲೂಕು ಆಡಳಿತ ಸೌಧ ನಿರ್ಮಿಸಲು ಕಟ್ಟಡಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಪೀಠೋಪಕರಣ, ಒಳಾಂಗಣ ವಿನ್ಯಾಸ, ವಿದ್ಯುಚ್ಛಕ್ತಿ ಸೌಲಭ್ಯ, ಶೌಚಾಲಯ, ಲಿಫ್ಟ್ ಅಳವಡಿಕೆ ಇನ್ನಿತರೆ ಎಲ್ಲಾ ಪೂರಕ ಸೌಲಭ್ಯಗಳನ್ನೊಳಗೊಂಡಂತೆ ಕಡ್ಡಾಯವಾಗಿ ರೂ.10.00 ಕೋಟಿಗಳ ಅಂದಾಜು ಮಿತಿಯಲ್ಲಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ. ಅದರಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ತಾಲ್ಲೂಕು ಆಡಳಿತ ಸೌಧ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸ್ಥಳ ಗುರುತಿಸಿ, ಕಟ್ಟಡ ನಿರ್ಮಾಣ ಮಾಡಲು ಸವಿವರ ಅಂದಾಜು ಪಟ್ಟಿ ಮತ್ತು ನಕ್ಷೆಯೊಂದಿಗೆ ಪ್ರಸ್ತಾವನೆಯು ಸ್ವೀಕೃತವಾದ ನಂತರ ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಲಾಗುವುದು.
ಆ)	ಈಗಾಗಲೇ ಯಾವ ಯಾವ ಹೊಸ ತಾಲ್ಲೂಕುಗಳಲ್ಲಿ ತಾಲ್ಲೂಕು ಆಡಳಿತ ಸೌಧವನ್ನು ನಿರ್ಮಿಸಲಾಗುತ್ತಿದೆ;	ಹೊಸದಾಗಿ ರಚನೆಯಾದ ಕೆ.ಜಿ.ಎಫ್, ಮೂಡಬಿದಿರೆ, ಕಡಬ, ಮೂಲ್ಕಿ, ಬ್ರಹ್ಮಾವರ, ಕಾಪು, ಬೈಂದೂರು, ಹೆಬ್ರಿ, ಕುರುಗೋಡು, ಕಂಪ್ಲಿ, ಬಬಲೇಶ್ವರ, ತಿಕೋಟಾ ಮತ್ತು ದಾಂಡೇಲಿ ತಾಲ್ಲೂಕುಗಳಲ್ಲಿ ತಾಲ್ಲೂಕು ಆಡಳಿತ ಸೌಧ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಇ)	ವಿಜಯಪುರ ಜಿಲ್ಲೆಯಲ್ಲಿರುವ ನಿಡಗುಂದಿ ಮತ್ತು ಕೊಲ್ಹಾರ ಹೊಸ ತಾಲ್ಲೂಕುಗಳಲ್ಲಿ ಆಡಳಿತ ಸೌಧ ನಿರ್ಮಿಸಲು ಅನುದಾನ ಒದಗಿಸುವಂತೆ ಅಂದಾಜು ಪತ್ರಿಕೆಯೊಂದಿಗೆ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಯಾವ ದಿನಾಂಕದಂದು ಸಲ್ಲಿಸಿರುತ್ತಾರೆ;	ನಿಡಗುಂದಿ ತಾಲ್ಲೂಕಿನ ದೇವಲಾಪುರ ಗ್ರಾಮದ ಸ.ನಂ.47 ರಲ್ಲಿ ಹೊಸ ತಾಲ್ಲೂಕು ಆಡಳಿತ ಸೌಧ ನಿರ್ಮಿಸಲು ಲೋಕೋಪಯೋಗಿ ಇಲಾಖೆಯ ರೂ.10.00 ಕೋಟಿಗಳ ಸವಿವರ ಅಂದಾಜು ಪಟ್ಟಿ ಮತ್ತು ನಕ್ಷೆಯೊಂದಿಗೆ ದಿ:02.09.2021 ರಂದು ಪ್ರಸ್ತಾವನೆಯು ಜಿಲ್ಲಾಧಿಕಾರಿಯವರಿಂದ ಸ್ವೀಕೃತವಾಗಿದೆ. ಕೊಲ್ಹಾರ ತಾಲ್ಲೂಕಿನ ತಾಲ್ಲೂಕು ಆಡಳಿತ ಸೌಧವನ್ನು ಕೊಲ್ಹಾರ ಪಟ್ಟಣದ ರಿ.ಸ.ನಂ.52/1ರ ಕ್ಷೇತ್ರ 2 ಎಕರೆ 2 ಗುಂಟೆ ಜಮೀನಿನಲ್ಲಿ ನಿರ್ಮಿಸಲು ಲೋಕೋಪಯೋಗಿ ಇಲಾಖೆಯ ರೂ.10.00 ಕೋಟಿಗಳ ಸವಿವರ ಅಂದಾಜು ಪಟ್ಟಿ ಮತ್ತು ನಕ್ಷೆಯೊಂದಿಗೆ ದಿ:02.09.2021 ರಂದು ಪ್ರಸ್ತಾವನೆಯು ಜಿಲ್ಲಾಧಿಕಾರಿಯವರಿಂದ ಸ್ವೀಕೃತವಾಗಿದೆ.
ಈ)	ಹಾಗಿದ್ದಲ್ಲಿ, ನಿಡಗುಂದಿ ಮತ್ತು ಕೊಲ್ಹಾರ ಹೊಸ ತಾಲ್ಲೂಕುಗಳಿಗೆ ಆಡಳಿತ ಸೌಧ ನಿರ್ಮಿಸಲು ಅನುದಾನ ಮಂಜೂರು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಆರ್ಥಿಕ ಇಲಾಖೆಯು ವಿಜಯಪುರ ಜಿಲ್ಲೆಯ ನೂತನ ನಿಡಗುಂದಿ ಮತ್ತು ಕೊಲ್ಹಾರ ತಾಲ್ಲೂಕುಗಳಲ್ಲಿ ಹೊಸ ಆಡಳಿತ ಸೌಧ ನಿರ್ಮಿಸುವ ಪ್ರಸ್ತಾವನೆಯನ್ನು ಮುಂದೂಡುವಂತೆ ತಿಳಿಸಿದ್ದು, ಮತ್ತೆ ಆರ್ಥಿಕ ಇಲಾಖೆಯೊಂದಿಗೆ ವ್ಯವಹರಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಕಂಇ 8 ಡಬ್ಲ್ಯೂಬಿಆರ್ 2023

(ಆರ್. ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು : ಶ್ರೀ ಶಿವಾನಂದ ಎಸ್.ಪಾಟೀಲ್(ಬಸವನಬಾಗೇವಾಡಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 258
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸಬೇಕಾದ ದಿನಾಂಕ : 13.02.2023

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೂಡಲಸಂಗಮ ಅಭಿವೃದ್ಧಿ ಮಂಡಳಿಗೆ ಸರ್ಕಾರವು ಬಿಡುಗಡೆ ಮಾಡಿದ್ದ ಕಾರ್ಪಸ್ ಫಂಡ್ ಮೊತ್ತವೆಷ್ಟು; ಅದನ್ನು ಯಾವ ವರ್ಷ ಬಿಡುಗಡೆ ಮಾಡಲಾಗಿದೆ;	ರೂ.500.00 ಲಕ್ಷಗಳ ಕಾರ್ಪಸ್ ಫಂಡ್ ನಿಧಿಯನ್ನು 1997-98ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದೆ.
ಆ)	ಬ್ಯಾಂಕ್ ಮುದ್ದತ ಠೇವಣಿಯಿಂದ ಪಕ್ವವಾಗಿರುವ ಕಾರ್ಪಸ್ ಫಂಡ್ ಮೊತ್ತವೆಷ್ಟು;	ರೂ,18,72,54,082-00
ಇ)	ಬ್ಯಾಂಕ್ ಮುದ್ದತ ಠೇವಣಿ ಮತ್ತು ಅದರ ಮೇಲಿನ ಬಡ್ಡಿ ಹಣ ಸೇರಿದಂತೆ ಇದುವರೆಗೂ ಸಂಗ್ರಹವಾಗಿರುವ ಮೊತ್ತವೆಷ್ಟು;	ಮೂಲ ಕಾರ್ಪಸ್ ಫಂಡ್ ಮೊತ್ತ ರೂ.5,00,00,000-00 ಹಾಗೂ ಇಲ್ಲಿಯವರೆಗೂ ಸಂಗ್ರಹವಾದ ಬಡ್ಡಿ ಮೊತ್ತ ರೂ.13,72,54,082.00ಗಳು ಸೇರಿ ಒಟ್ಟು ಮೊತ್ತ ರೂ.18,72,54,082.00 ಆಗಿರುತ್ತದೆ.
ಈ)	ಸಂಗ್ರಹವಾಗಿರುವ ಮೊತ್ತದಲ್ಲಿ ಇದುವರೆಗೂ ಮಾಡಲಾಗಿರುವ ವೆಚ್ಚವೆಷ್ಟು;	ಕಾರ್ಪಸ್ ಫಂಡನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿಯಾಗಿ ಇರಿಸಿ ಅದರ ಮೇಲಿನ ಬಡ್ಡಿ ಅಂದಾಜು ರೂ.1.00 ಕೋಟಿ ಮೊತ್ತವನ್ನು ಮಾತ್ರ ಮಂಡಳಿಯ ವಾರ್ಷಿಕ ನಿರ್ವಹಣೆ ಕಾರ್ಯಕ್ರಮಗಳಾದ ವಿದ್ಯುತ್ ದೀಪಗಳು, ವಿದ್ಯುತ್ ಶುಲ್ಕ ಪಾವತಿ, ಸಾರ್ವಜನಿಕರಿಗೆ ಶುದ್ಧಿಕರಿಸಿದ ಕುಡಿಯುವ ನೀರು ಸರಬರಾಜು, ಉದ್ಯಾನವನ ನಿರ್ವಹಣೆ, ಕಟ್ಟಡಗಳ ಸ್ವಚ್ಛತೆ, ಮತ್ತು ದುರಸ್ತಿ ಮಾಡುವುದು. ಗ್ರಂಥಾಲಯ ನಿರ್ವಹಣೆ ಹಾಗೂ ಇತರೇ ಧಾರ್ಮಿಕ ಕಾರ್ಯಕ್ರಮ ನಿರ್ವಹಣೆ ಮಾಡುವುದು. ಕಾರ್ಪಸ್ ಫಂಡ್ ನಿಯಮ 6 ರಲ್ಲಿ ಖರ್ಚಾಗದೇ ಉಳಿದ ಹಣವನ್ನು ವರ್ಷದ ಅಂತ್ಯದಲ್ಲಿ ಕಾರ್ಪಸ್ ಫಂಡ್ ನಿಧಿಯ ಅಸಲಿಗೆ ಸೇರಿಸತಕ್ಕದ್ದು, ಹೀಗೆ ಕಾರ್ಪಸ್ ಫಂಡ್ ಶಾಶ್ವತವಾಗಿ ಬೆಳೆಯುವಂತೆ ನೋಡಿಕೊಳ್ಳತಕ್ಕದ್ದು ಎಂಬ ಷರತ್ತು ವಿಧಿಸಲಾಗಿರುವುದರಿಂದ, ಮಂಡಳಿಯಿಂದ ಸದರಿ ಕಾರ್ಪಸ್ ಫಂಡ್ ಬಡ್ಡಿಯನ್ನು ಬಳಸಿಕೊಂಡಿರುವುದಿಲ್ಲ.
ಉ	ಕಾರ್ಪಸ್ ಫಂಡಿನ ಹೆಚ್ಚುವರಿ ಮೊತ್ತದಲ್ಲಿ ಬಸವನ ಬಾಗೇವಾಡಿ ಯಾತ್ರಿನಿವಾಸದ ಮೇಲ್ಭಾಗದಲ್ಲಿ ಹೆಚ್ಚುವರಿ ವಸತಿ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಕೂಡಲಸಂಗಮ ಅಭಿವೃದ್ಧಿ ಮಂಡಳಿಯ ಕಾರ್ಪಸ್ ಫಂಡ ನಿಯಮ 3 ರಲ್ಲಿ ಯಾವುದೇ ಸಂದರ್ಭದಲ್ಲಿ ಕಾರ್ಪಸ್ ಫಂಡಿನ ಅಸಲನ್ನು ಇತರ ಯಾವುದೇ ಉದ್ದೇಶಗಳಿಗೆ ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಸರ್ಕಾರದ ಅನುದಾನದಲ್ಲಿ ಯಾತ್ರಿನಿವಾಸದ ಹೆಚ್ಚುವರಿ ಕೊಠಡಿಗಳನ್ನು ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಊ	ಕಾರ್ಪಸ್ ಫಂಡಿನ ಹೆಚ್ಚುವರಿ ಮೊತ್ತದಲ್ಲಿ ಬಸವನ ಬಾಗೇವಾಡಿ ಯಾತ್ರಿನಿವಾಸದ ಮೇಲ್ಭಾಗದಲ್ಲಿ ಹೆಚ್ಚುವರಿ ವಸತಿ ಕೊಠಡಿಗಳನ್ನು ನಿರ್ಮಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು ?	ಬಸವನ ಬಾಗೇವಾಡಿಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಿರುವ ಯಾತ್ರಿ ನಿವಾಸವನ್ನು ಅಧಿಕೃತವಾಗಿ ಮಂಡಳಿಯ ಹೆಸರಿಗೆ ವರ್ಗಾಯಿಸಿದಲ್ಲಿ ಮಂಡಳಿಯ ವತಿಯಿಂದ ಹೆಚ್ಚುವರಿಯಾಗಿ ವಸತಿ ಕೊಠಡಿಗಳನ್ನು ನಿರ್ಮಿಸಲು ಅವಕಾಶವಿರುತ್ತದೆ.

ಸಂಖ್ಯೆ: ಕಂಇ 23 ಆರ್‌ಬಿಎ 2023

(ಆರ್. ಅಶೋಕ)
ಕಂದಾಯ ಸಚಿವರು.

ಕರ್ನಾಟಕ ವಿಧಾನಸಭೆ
15ನೇ ವಿಧಾನಸಭೆ
15ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.	:	259
ಮಾನ್ಯ ಸದಸ್ಯರ ಹೆಸರು	:	ಶ್ರೀ. ಶಿವಾನಂದ ಎಸ್.ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸುವ ದಿನಾಂಕ	:	13-02-2023
ಉತ್ತರಿಸುವ ಸಚಿವರು	:	ಮಾನ್ಯ ಲೋಕೋಪಯೋಗಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಬಾರಖೇಡ-ಬೀಳಗಿ ರಾಜ್ಯ ಹೆದ್ದಾರಿ-124ರ ಕಿ.ಮೀ 0.50 ಬಸವನ ಬಾಗೇವಾಡಿ ಪಟ್ಟಣದ ಪರಿಮಿತಿಯಲ್ಲಿ ಸೇತುವೆ ನಿರ್ಮಿಸುವ ಕಾಮಗಾರಿಯನ್ನು ಯಾವ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ;	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕೈಗೊಳ್ಳಲಾದ ಕಿರು ಸೇತುವೆಗಳ ಪ್ಯಾಕೇಜ್-ಎ1 ನಲ್ಲಿ ಬಾರಖೇಡ-ಬೀಳಗಿ ರಾಜ್ಯ ಹೆದ್ದಾರಿ-124ರ ಕಿ.ಮೀ 0.50 ಬಸವನಬಾಗೇವಾಡಿ ಪಟ್ಟಣದ ಪರಿಮಿತಿಯಲ್ಲಿ ಸೇತುವೆ ನಿರ್ಮಿಸುವ ಕಾಮಗಾರಿಯು ಸೇರಿದ್ದು, ಸದರಿ ಕಾಮಗಾರಿಯನ್ನು ಟೆಂಡರ್ ಮುಖೇನ ಮೆ॥ ಕೆಎಂವಿ ಪ್ರಾಜೆಕ್ಟ್ಸ್, ಹೈದರಾಬಾದ್ ರವರಿಗೆ ರೂ.2.86 ಕೋಟಿ ಗುತ್ತಿಗೆ ಮೊತ್ತಕ್ಕೆ ವಹಿಸಲಾಗಿದೆ.
ಆ)	ಕಾಮಗಾರಿ ಪ್ರಗತಿಗೆ ಭೂ ಮಾಲೀಕರು ಅಡ್ಡಿಪಡಿಸುತ್ತಿರುವುದಕ್ಕೆ ಕಾರಣಗಳೇನು;	ಸೇತುವೆಯ ಕಾಮಗಾರಿಯು ಪೂರ್ಣಗೊಂಡಿದ್ದು, ವಿಜಯಪುರ ಕಡೆಯ ಅಪ್ರೋಚ್ ರಸ್ತೆಯು ಪೂರ್ಣಗೊಂಡಿರುತ್ತದೆ. ಬಾಸವನಬಾಗೇವಾಡಿ ಪಟ್ಟಣದ ಕಡೆಯ ಅಪ್ರೋಚ್ ರಸ್ತೆಯ ಜಿಎಸ್‌ಬಿ ಕೆಲಸವು ಪೂರ್ಣಗೊಂಡ ನಂತರ ಅಪ್ರೋಚ್ ರಸ್ತೆಯು ಗಡಿರೇಖೇಯ ಒಳಭಾಗದಲ್ಲಿದ್ದರೂ ಸಹ ಭೂ ಮಾಲೀಕರು ಕಾಮಗಾರಿಗೆ ಒಂದು ವರ್ಷದಿಂದ ಅಡ್ಡಿ ಪಡಿಸುತ್ತಿದ್ದು, ಈ ಸಂಬಂಧ ಭೂ ಮಾಲೀಕರು ಭೂ ಪರಿಹಾರ ಕೋರಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಒ.ಎಸ್. ಸಂ. 33/2021 ಯನ್ನು ದಿನಾಂಕ:15-01-2021 ರಂದು ಪ್ರಕರಣವನ್ನು ದಾಖಲಿಸಿದ್ದು, ನ್ಯಾಯಾಲಯವು ವಿಚಾರಣೆ ನಂತರ ಭೂ ಮಾಲೀಕರು ಹೂಡಿದ್ದ ದಾವೆಯನ್ನು ವಜಾಗೊಳಿಸಿ ದಿನಾಂಕ: 28-02-2022ರಂದು ಆದೇಶ ನೀಡಿದೆ. ಮುಂದುವರೆದು, ಭೂ ಮಾಲೀಕರು ಕಾಮಗಾರಿಯನ್ನು ಪ್ರಾರಂಭಿಸಲು ಅಡ್ಡಿಪಡಿಸಿ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿಯನ್ನು ಮೇಲ್ಮನವಿ ಸಂಖ್ಯೆ: 06/2022 ದಿನಾಂಕ: 29-03-2022 ರಂದು ಹೂಡಿರುತ್ತಾರೆ. ಪ್ರಕರಣವು ವಿಚಾರಣೆ ಹಂತದಲ್ಲಿದ್ದು, ಮುಂದಿನ ವಿಚಾರಣೆಯು ದಿನಾಂಕ: 16-02-2023 ರಂದು ನಿಗದಿಯಾಗಿರುತ್ತದೆ.

ಇ)	ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಇತ್ಯರ್ಥಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು?	ನ್ಯಾಯಾಲಯದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗಮದ ಪತಿಯಿಂದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಬಸವನಬಾಗೇವಾಡಿ ರವರಿಗೆ ಜಿಲ್ಲಾಧಿಕಾರಿಗಳ ಮೂಲಕ ದಾಖಲೆಗಳನ್ನು ಸಲ್ಲಿಸಿ, ಭೂ ಮಾಲೀಕರು ಹೂಡಿರುವ ಮೇಲ್ಮನವಿಯನ್ನು ತೆರವುಗೊಳಿಸಲು ಮನವಿ ಮಾಡಲಾಗಿದೆ. ಪ್ರಕರಣವು ವಿಚಾರಣೆ ಹಂತದಲ್ಲಿದ್ದು, ಮುಂದಿನ ವಿಚಾರಣೆಯು ದಿನಾಂಕ: 16-02-2023 ರಂದು ನಿಗದಿಯಾಗಿರುತ್ತದೆ. ನ್ಯಾಯಾಲಯದ ಆದೇಶದನ್ವಯ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಲೋಇ E- ಇಎಪಿ 2023

(ಸಿ.ಸಿ. **ಪಾಟೀಲ್**)
ಲೋಕೋಪಯೋಗಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	260
ಮಾನ್ಯ ಸದಸ್ಯರ ಹೆಸರು	ಶ್ರೀ ಶಿವಾನಂದ ಸ್. ಪಾಟೀಲ್ (ಬಸವನಬಾಗೇವಾಡಿ)
ಉತ್ತರಿಸಬೇಕಾದ ದಿನಾಂಕ	13.02.2023
ಉತ್ತರಿಸುವ ಸಚಿವರು	ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ಬಸವನ ಬಾಗೇವಾಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು ನಿರ್ಮಿಸಲಾಗಿದೆಯೇ?	ಕರ್ನಾಟಕ ಗೃಹ ಮಂಡಳಿ ವತಿಯಿಂದ ಬಸವನ ಬಾಗೇವಾಡಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವನ್ನು 2012 ರಲ್ಲಿ ಠೇವಣಿವಂತಿಕೆ ಆಧಾರದಲ್ಲಿ ನಿರ್ಮಿಸಿ ದಿನಾಂಕ: 11.01.2014 ರಲ್ಲಿ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ.
ಆ	ಹಾಗಿದ್ದಲ್ಲಿ ಮಂಡಳಿಯಿಂದ ಕಾಲೇಜಿನ ಕಟ್ಟಡವನ್ನು ಯಾವ ವರ್ಷ ನಿರ್ಮಿಸಲಾಗಿದೆ?	
ಇ	ಸದರಿ ವಸತಿ ಲೇಔಟ್‌ಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆಯೇ?	1. ಕರ್ನಾಟಕ ಗೃಹ ಮಂಡಳಿಯಿಂದ 2007 ರಲ್ಲಿ ಸರ್ವೆ ನಂ: 134 ರ ಒಟ್ಟು 10 ಎಕರೆ ಜಮೀನಿನಲ್ಲಿ ಮೊದಲನೇ ಹಂತದಲ್ಲಿ ವಸತಿ ಬಡಾವಣೆಯನ್ನು ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಿ 2010 ರಲ್ಲಿ ಪೂರ್ಣಗೊಳಿಸಿ ಸ್ವತ್ತುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿರುತ್ತದೆ. 2. 2010 ರಲ್ಲಿ ಸರ್ವೆ ನಂ: 146 ರ ಒಟ್ಟು 18ಎ-06ಗು ಜಮೀನಿನಲ್ಲಿ 2ನೇ ಹಂತದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗುತ್ತಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಹಂಚಿಕೆ ಮತ್ತು ಕಾಮಗಾರಿ ಮೇಲೆ ತಡೆಯಾಜ್ಞೆ ಇದ್ದುದರಿಂದ ಕಾಮಗಾರಿ ಸ್ಥಗಿತಗೊಂಡಿತ್ತು. ತದನಂತರ ಮಂಡಳಿ ಪರವಾಗಿ ತೀರ್ಪು ಬಂದಿದ್ದು ಬಾಕಿ ಕಾಮಗಾರಿಗಳನ್ನು ಆರಂಭಿಸಲು ಕ್ರಮಕೈಗೊಳ್ಳಲಾಗುತ್ತಿದೆ.
ಈ	ಇಲ್ಲದಿದ್ದಲ್ಲಿ, ಕಾರಣಗಳೇನು?	
ಉ	ಪ್ರಸ್ತುತ ಕಟ್ಟಡದ ಕಾಮಗಾರಿಯು ಯಾವ ಹಂತದಲ್ಲಿರುತ್ತದೆ.	ಸದರಿ ಕಾಲೇಜು ಕಟ್ಟಡಕ್ಕೆ 2018-19 ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಶಾಲಾ ಕೊಠಡಿ, ಗ್ರಂಥಾಲಯ, ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯಗಳ ನಿರ್ಮಾಣ ಕಾಮಗಾರಿ ಅನುಮೋದನೆಯಾಗಿದ್ದು, ಪ್ರಸ್ತುತ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ.
ಊ	ಕಾಮಗಾರಿ ಕಳಪೆಯಾಗಿರುವುದನ್ನು ಪರಿಶೀಲಿಸಿ ಮಂಡಳಿಯಿಂದ ಕಟ್ಟಡದ ನಿರ್ಮಾಣದಲ್ಲಿ ಆಗಿರುವ ನ್ಯೂನ್ಯತೆಗಳನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?	2012 ರಲ್ಲಿ ವಹಿಸಲಾದ ಕಾಮಗಾರಿಯನ್ನು ಗೃಹ ಮಂಡಳಿಯಿಂದ ಗುಣಾತ್ಮಕವಾಗಿ ನಿರ್ಮಿಸಿ ದಿನಾಂಕ 11.01.2014 ರಂದು ಕಟ್ಟಡವನ್ನು ಹಸ್ತಾಂತರಿಸಲಾಗಿದೆ. ಸದರಿ ಕಟ್ಟಡದ ನಿರ್ವಹಣೆ ಇಲ್ಲದೆ ಕೆಲವೊಂದು ದುರಸ್ತಿ ಕಾಮಗಾರಿಗಳು ಕಂಡು ಬಂದಿರುತ್ತವೆ. ದಿನಾಂಕ:11.01.2023 ರಂದು ಆಯುಕ್ತರು, ಶಿಕ್ಷಣ ಇಲಾಖೆ ಅವರು ರಾಜ್ಯದ ವಿವಿಧ ಕಾಲೇಜು

		ಕಟ್ಟಡಗಳಲ್ಲಿರುವ ದುರಸ್ತಿ ಕಾಮಗಾರಿಗಳ ಬಗ್ಗೆ ವಿಡಿಯೋ ಸಂವಾದ ಸಭೆಯನ್ನು ಜರುಗಿಸಿದ್ದು, ಸದರಿ ಸಭೆಯಲ್ಲಿ ಪ್ರಾಂಶುಪಾಲರು ಬಸವನ ಬಾಗೇವಾಡಿ ಅವರು ಕಟ್ಟಡದ ದುರಸ್ತಿ ಕಾಮಗಾರಿ ಬಗ್ಗೆ ಕರ್ನಾಟಕ ಗೃಹ ಮಂಡಳಿ ಆಯುಕ್ತರ ಗಮನಕ್ಕೆ ತಂದಿರುತ್ತಾರೆ. ಅದರಂತೆ ಸದರಿ ದುರಸ್ತಿ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜುಪಟ್ಟಿ ಅನುಮೋದನೆ ಪಡೆದು ದುರಸ್ತಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕರ್ನಾಟಕ ಗೃಹ ಮಂಡಳಿ ವತಿಯಿಂದ ನಿರ್ವಹಿಸಲಾಗುವುದು.

(ಸಂಖ್ಯೆ: ವಇ 22 ಕಗೃಮಂ 2023)

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	261
ಸದಸ್ಯರ ಹೆಸರು	ಶ್ರೀ ಶಿವಾನಂದ ಎಸ್. ಪಾಟೀಲ್
ಉತ್ತರಿಸುವ ದಿನಾಂಕ:	13.02.2023
ಉತ್ತರಿಸುವವರು	ಧಾಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು

	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಮುಜರಾಯಿ ದೇವಸ್ಥಾನಗಳಿಗೆ ರಥ ನಿರ್ಮಿಸಲು ಅನುದಾನ ಒದಗಿಸಲಾಗುತ್ತಿದೆಯೇ;	ಹೌದು.
ಆ	ಹಾಗಿದ್ದಲ್ಲಿ, ರಾಜ್ಯದಲ್ಲಿ ಇದುವರೆಗೂ ಎಷ್ಟು ಮುಜರಾಯಿ ದೇವಸ್ಥಾನಗಳಿಗೆ ರಥ ನಿರ್ಮಿಸಲು ಅನುದಾನವನ್ನು ಒದಗಿಸಲಾಗಿದೆ.	2022-23ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯ ಈ ಕೆಳಕಂಡ 02 ಅಧಿಸೂಚಿತ ಸಂಸ್ಥೆಗಳಿಗೆ ರಥ ನಿರ್ಮಾಣ ಅನುದಾನವನ್ನು ಮಂಜೂರು ಮಾಡಲಾಗಿದೆ. (ರೂ.ಲಕ್ಷಗಳಲ್ಲಿ) (see table below)
ಇ	ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಶ್ರೀ ಮುದ್ದೇಶ್ವರ ಪ್ರಭು ದೇವಸ್ಥಾನಕ್ಕೆ ರಥ ನಿರ್ಮಿಸಲು ಅನುದಾನವನ್ನು ಒದಗಿಸಲಾಗುವುದೇ;	ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಶ್ರೀ ಮುದ್ದೇಶ್ವರ ದೇವಸ್ಥಾನಕ್ಕೆ ರಥ ನಿರ್ಮಿಸಲು ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ, ಆದ್ದರಿಂದ ಅನುದಾನ ಮಂಜೂರಾಗಿರುವುದಿಲ್ಲ.
ಈ	ಅನುದಾನ ಒದಗಿಸಲು ಸರ್ಕಾರದಿಂದ ಕೈಗೊಳ್ಳಲಾಗಿರುವ ಕ್ರಮಗಳೇನು?	ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 95 ಮುಅಬಿ 2010 ದಿನಾಂಕ:20.09.2010 ಮಾರ್ಗಸೂಚಿಯನ್ವಯ ಕ್ರಮಕೈಗೊಳ್ಳಲಾಗುವುದು..

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ದೇವಾಲಯದ ವಿವರ	ಅನುದಾನದ ಮೊತ್ತ
1	ಶ್ರೀ ಚಾಮರಾಜೇಶ್ವರಸ್ವಾಮಿ ದೇವಾಲಯ, ಚಾಮರಾಜನಗರ.	15.69
2	ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ, ಯಳಂದೂರು ತಾಲ್ಲೂಕು,	44.63

(ಸಂಖ್ಯೆ: ಕಂಇ 07 ಮುಸಪ್ರ 2023)

(ಶಶಿಕಲಾ. ಅ. ಜೊಲ್ಲೆ)
ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 311
ಸದಸ್ಯರ ಹೆಸರು : ಶ್ರೀ ಸುರೇಶ್ ಡಿ.ಎಸ್.(ತರೀಕೆರೆ)
ಉತ್ತರಿಸುವ ದಿನಾಂಕ : **13/02/2023**
ಉತ್ತರಿಸುವ ಸಚಿವರು : ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಅರ್ಜಿ ನಮೂನೆ-94 ಸಿಸಿ ಅಂದರೆ ಏನು; ಇದು ಯಾರಿಗೆ ಅನ್ವಯಿಸುತ್ತದೆ; ಇದರ ಕುರಿತು ಪೂರ್ಣ ವಿವರವನ್ನು ಮಾಧ್ಯಮ ಗಳಲ್ಲಿ ನೀಡಲಾಗಿದೆಯೇ;	ನಗರ ಪ್ರದೇಶದಲ್ಲಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಸಿಸಿ ರಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ಅರ್ಜಿ ಸಲ್ಲಿಸಲು ದಿನಾಂಕ: 31.03.2022ರವರೆಗೆ ಕಾಲಾವಕಾಶ ಕಲ್ಪಿಸಲಾಗಿತ್ತು ಹಾಗೆಯೇ, ಸ್ವೀಕೃತವಾದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಇತ್ಯರ್ಥಪಡಿಸಲು ದಿನಾಂಕ; 30.03.2023ರವರಗೆ ಕಾಲಾವಕಾಶವಿರುತ್ತದೆ. ಸದರಿ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:12.05.2021 ರಂದು ಪ್ರಕಟಗೊಂಡಿದ್ದು, ಈ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಆರ್‌ಡಿ 152 ಎಲ್‌ಜಿಪಿ 2020ರ ಪತ್ರದ ಮೂಲಕ ನಿರ್ದೇಶನ ನೀಡಲಾಗಿದೆ.
ಆ)	ಅರ್ಜಿ ನಮೂನೆ-94 ಸಿಸಿ ರ ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ ಜನ ಸಾಮಾನ್ಯರು ಸರ್ಕಾರಿ ಕಛೇರಿಗಳಿಗೆ ಅಲೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರಿಯಾದ ಮಾಹಿತಿ ನೀಡಲು ಮತ್ತು ಅರ್ಜಿಯನ್ನು ಪಡೆಯಲು ದಿನಾಂಕವನ್ನು ಮುಂದುವರೆಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ನಗರ ಪ್ರದೇಶದಲ್ಲಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94-ಸಿಸಿ ರಡಿ ಅರ್ಜಿ ಸಲ್ಲಿಸಲು ದಿನಾಂಕ: 31.03.2022ರವರಗೆ ಅವಕಾಶ ಕಲ್ಪಿಸಲಾಗಿದ್ದು, ಸದರಿ ಅವಧಿಯು ಮುಕ್ತಾಯಗೊಂಡಿರುತ್ತದೆ.

ಸಂಖ್ಯೆ: ಆರ್‌ಡಿ 10 ಎಲ್‌ಜಿಕ್ಯೂ 2023

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಸದಸ್ಯರ ಹೆಸರು	:	ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ-ಧಾರವಾಡ ಪೂರ್ವ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	312
ಉತ್ತರಿಸಬೇಕಾದ ದಿನಾಂಕ	:	13.02.2023
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರಕ್ಕೆ 2020-21 ರಿಂದ 2022-23ನೇ ಸಾಲಿನವರೆಗೆ ಒಟ್ಟು ಎಷ್ಟು ಪಶುಭಾಗ್ಯ ಯೋಜನೆಯಡಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ; (ವಿವರ ನೀಡುವುದು)	ಪಶುಭಾಗ್ಯ ಯೋಜನೆಯನ್ನು ಮುಖ್ಯಮಂತ್ರಿಗಳ ಅಮೃತ ಜೀವನ ಯೋಜನೆ ಎಂದು ಮರುನಾಮಕರಣ ಮಾಡಲಾಗಿರುತ್ತದೆ. ಈ ಯೋಜನೆಗೆ 2020-21ನೇ ಸಾಲಿಗೆ ಕೋವಿಡ್ ಹಿನ್ನೆಲೆಯಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ. 2021-22ನೇ ಸಾಲಿನಲ್ಲಿ ಹುಬ್ಬಳ್ಳಿ-ಧಾರವಾಡ ಪೂರ್ವ ಕ್ಷೇತ್ರದಲ್ಲಿ ಯಾವುದೇ ಫಲಾನುಭವಿ ಇರುವುದಿಲ್ಲ. 2022-23ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆಯಲ್ಲಿ ಗುರಿಗಳನ್ನು ಈಗಾಗಲೇ ತಾಲ್ಲೂಕುಗಳಿಗೆ ನಿಗದಿಪಡಿಸಿ ನೀಡಲಾಗಿದ್ದು, ಆಯ್ಕೆ ಪ್ರಕ್ರಿಯೆ ಚಾಲ್ತಿಯಲ್ಲಿದೆ.
ಆ	ಧಾರವಾಡ ಜಿಲ್ಲೆ ವ್ಯಾಪ್ತಿಯ ಇತರೆ ಕ್ಷೇತ್ರಗಳಿಗೆ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ? (ವಿವರ ನೀಡುವುದು)	ಧಾರವಾಡ ಜಿಲ್ಲೆ ವ್ಯಾಪ್ತಿಯ ಇತರೆ ಕ್ಷೇತ್ರಗಳಲ್ಲಿ ಮುಖ್ಯ ಮಂತ್ರಿಗಳ ಅಮೃತ ಜೀವನ ಯೋಜನೆ ಅಡಿಯಲ್ಲಿ 2021-22ನೇ ಸಾಲಿನಲ್ಲಿ ಆಯ್ಕೆ ಮಾಡಲಾದ ಫಲಾನುಭವಿಗಳ ವಿವರ ಹಾಗೂ 2022-23ನೇ ಸಾಲಿಗೆ ನಿಗದಿಪಡಿಸಲಾದ ಗುರಿಗಳ ವಿವರವನ್ನು ಅನುಬಂಧದಲ್ಲಿ ನೀಡಿದೆ.

ಇ- ಪಸಂಮೀ 18 ಸಲೆವಿ 2023

(ಪ್ರಭು ಬಿ. ಚವ್ಹಾಣ್)
ಪಶುಸಂಗೋಪನೆ ಸಚಿವರು

ಪ್ರಶ್ನೆ ಸಂಖ್ಯೆ:312 ಕ್ಕೆ ಅನುಬಂಧ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	2021-2022			2022-2023 (ಆಯ್ಕೆ ಪ್ರಕ್ರಿಯೆ ಜಾರಿಯಲ್ಲಿದೆ)		
		ಸಾಮಾನ್ಯ	ಪ. ಜಾತಿ	ಪ.ಪಂಗಡ	ಸಾಮಾನ್ಯ	ಪ. ಜಾತಿ	ಪ.ಪಂಗಡ
1.	ಹುಬ್ಬಳ್ಳಿ-ಧಾರವಾಡ ಕೇಂದ್ರ	--	--	--	9	1	--
2.	ಹುಬ್ಬಳ್ಳಿ-ಧಾರವಾಡ ಪಶ್ಚಿಮ	--	--	--	--	--	--
3.	ಹುಬ್ಬಳ್ಳಿ-ಧಾರವಾಡ ಗ್ರಾಮೀಣ	19	1	--	20	1	1
4.	ಕಲಘಟಗಿ	24	3	1	18	2	1
5.	ಕುಂದಗೋಳ	25	2	1	27	2	1
6.	ನವಲಗುಂದ	24	1	1	26	2	--
ಒಟ್ಟು		92	7	3	100	8	3

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 324
ಮಾನ್ಯ ಸದಸ್ಯರ ಹೆಸರು : ಶ್ರೀ ಸುಕುಮಾರ್ ಶೆಟ್ಟಿ ಬಿ.ಎಂ. (ಬೈಂದೂರು)
ಉತ್ತರಿಸುವ ದಿನಾಂಕ : 13.02.2023
ಉತ್ತರಿಸುವ ಸಚಿವರು : ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
